*ಅಪೊಸ್ತಲನಾದ ಪೌಲನು*

# ಗಲಾತ್ಯದವರಿಗೆ ಬರೆದ ಪತ್ರಿಕೆ

**ಲೇಖಕ:**

ಕರ್ತನಾದ ಯೇಸು ಕ್ರಿಸ್ತನ ಅಪೋಸ್ತಲನಾದ ಪೌಲನು

**ದಿನಾಂಕ:**

ಸುಮಾರು ಕ್ರಿ.ಶ 49 ಮತ್ತು 58 ನಡುವೆ

**ವಿಷಯಗಳು:**

ಗಲಾತ್ಯ ಪ್ರಾಂತದಲ್ಲಿದ್ದ ಕೆಲವು ಸಭೆಗಳು (ಈಗಿನ ಟರ್ಕಿ ದೇಶದಲ್ಲಿ) ನೇರವಾಗಿ ಪೌಲನ ಶ್ರಮೆಯ ಫಲವಾಗಿತ್ತು (4:13-15. ಅಪೊ 4 ನೇ ಅಧ್ಯಾಯವನ್ನು ನೋಡಿರಿ. ಇಕೋನಿಯಂ, ಲಿಸ್ತ್ರ ಮತ್ತು ದರ್ಬೆಯು ಲಲಾಕೋನಿಯ ಎಂದು ಕರೆಯಲ್ಪಡುವ ಪ್ರಾಂತ್ಯದಲ್ಲಿದ್ದ ಪಟ್ಟಣಗಳು, ಆದರೆ ಕೆಲವು ಸಾರಿ "ದಕ್ಷಿಣ ಗಲಾತ್ಯ" ಎಂದು ಕರೆಯಲಾಗುತ್ತಿತ್ತು). ನಂತರದಲ್ಲಿ ಕ್ರಿಸ್ತನ ಸೇವಕರೆಂದು ಹೇಳಿಕೊಳ್ಳುವ ಕೆಲವು ಯೆಹೂದ್ಯ ಕ್ರೈಸ್ತರು ಅಲ್ಲಿ ಬಂದು ಕ್ರಿಸ್ತನ ಸುವಾರ್ತೆಯನ್ನು ತಡೆಯಲು ಪ್ರಯತ್ನಿಸಿದರು. ರಕ್ಷಣೆಹೊಂದಲು ದೇವರ ಕೃಪೆ ಮತ್ತು ಕ್ರಿಸ್ತನಲ್ಲಿ ನಂಬಿಕೆಯು ಸಾಕಾಗುವದಿಲ್ಲ, ಆದರೆ ಎಲ್ಲಾ ಕ್ರೈಸ್ತರು ಯೆಹೂದ್ಯರೋ ಅಥವಾ ಅಲ್ಲವೋ ಮೋಶೆಯ ಧರ್ಮಶಾಸ್ತ್ರವನ್ನು ಅನುಸರಿಸಬೇಕೆಂದು ಬೋಧಿಸುತ್ತಿದ್ದರು. ಪೌಲನು ಗಲಾತ್ಯ ಕ್ರೈಸ್ತರಿಗೆ ಎಲ್ಲಾ ಕಡೆಯಲ್ಲಿಯೂ ಭೋಧಿಸುತ್ತಿದದ್ದನ್ನೇ ಬೋಧಿಸಿದನು: ನಂಬಿಕೆಯ ಮೂಲಕ ದೇವರ ಕೃಪೆಯ ಮೂಲಕ ಮಾತ್ರ ರಕ್ಷಣೆಯು ಉಂಟಾಗುತ್ತದೆ (ಎಫೆ 2:8-9). ಈ ಪತ್ರಿಕೆಯಲ್ಲಿ, ಯೆಹೂದ್ಯ ಜನಾಂಗದ ಮೂಲ ತಂದೆಯಾದ ಅಬ್ರಹಾಮನ ಉದಾಹರಣೆಯನ್ನು, ಬೇರೆ ಪುರಾವೆಗಳನ್ನು, ಈ ಪತ್ರಿಕೆಯಲ್ಲಿ ಉಪಯೋಗಿಸಿ ಪೌಲನು ಸತ್ಯವನ್ನು ಒಮ್ಮೆಲೆ ಸಾಬೀತುಪಡಿಸುತ್ತಾನೆ. ಆತ್ಮಿಕ ಸಂಪೂರ್ಣತೆ ಮತ್ತು ಪರಿಶುದ್ಧ ಜೀವಿತವು ಇದರ ಮೂಲಕ ಮಾತ್ರ ದೊರಕುತ್ತದೆ ಎಂಬುದನ್ನು ಸಹ ಒತ್ತಿಹೇಳುತ್ತಾನೆ – ಕೃಪೆಯಿಂದ ಸಂಬಿಕೆಯ ಮೂಲಕ. ಪತ್ರಿಕೆಯಲ್ಲಿರುವ ಕೆಲವು ಮುಖ್ಯವಾದ ಪದಗಳು "ನಂಬಿಕೆ", "ನೀತಿಕರಣ", "ಕೃಪೆ", "ಸ್ವಾತಂತ್ರ್ಯ", :ಶರೀರ", "ಶಿಲುಬೆ". ಕೆಲವು ಮುಖ್ಯ ವಚನಗಳು 2:16-21.

# 1

**1:1** "*ಅಪೋಸ್ತಲ*"– ಮತ್ತಾಯ 10:2; ರೋಮಾ 1:1.

*“ಸತ್ತವರೊಳಗಿಂದ”*– ಮತ್ತಾಯ 28:6. ತಂದೆಯಾದ ದೇವರು ಮತ್ತು ಯೇಸು ಕ್ರಿಸ್ತನ ನಡುವೆ ಪೌಲನು ಮಾಡುವ ವ್ಯತ್ಯಾಸವನ್ನು ಗಮನಿಸಿ. ಇಬ್ಬರೂ ಒಂದೇ ತ್ರಯೈಕತ್ವದಲ್ಲಿದ್ದಾರೆ, ಆದರೆ ಬೇರೆ ಬೇರೆ ವ್ಯಕ್ತಿಗಳಾಗಿದ್ದಾರೆ. ಮತ್ತಾಯ 3:16,17; ಯೋಹಾನ 17:1 ಮುಂತಾದವುಗಳ ಟಿಪ್ಪಣಿಯನ್ನು ನೋಡಿರಿ. **2**

**1:2** ಗಲಾತ್ಯವು ಒಂದು ದೊಡ್ಡ ಪ್ರಾಂತ್ಯವಾಗಿತ್ತು. ಇದು ಈಗ ಟರ್ಕಿ ಎಂದು ಕರೆಯಲ್ಪಡುತ್ತದೆ. ಇಕೋನ್ಯ, ಲುಸ್ತ್ರ ಮತ್ತು ದೆರ್ಬೆ (ಅಪೊ 14:1-20) ಈ ಪ್ರಾಂತ್ಯದಲ್ಲಿವೆ. **3**

**1:3** ರೋಮಾ 1:7. “ಕೃಪೆ” ಎಂಬ ಪದವು ಈ ಪತ್ರಿಕೆಯ ಮುಖ್ಯ ಪದವಾಗಿದೆ – 1:3,6,15; 2:9,21; 3:18; 5:4; 6:18 ಕೃಪೆಯ ಸುವಾರ್ತೆ ಎಂದರೆ ಏನೆಂಬುದಾಗಿ ಪೌಲನು ಸ್ಪಷ್ಟಪಡಿಸುತ್ತಾನೆ. **4**

**1:4** *“ನಮ್ಮ ಪಾಪಗಳಿಗಾಗಿ”*– ಯೆಶಾಯ 53:6,8,10; ಮತ್ತಾಯ 26:28; ಯೋಹಾನ 1:29; ರೋಮಾ 3:24,25; 1 ಕೊರಿಂಥ 15:3; 2 ಕೊರಿಂಥ 5:21; ಇಬ್ರಿ 9:28; 1 ಪೇತ್ರ 2:24; 3:18.

*“ನಮ್ಮನ್ನು ಬಿಡಿಸು”*– ಕ್ರಿಸ್ತನು ಮರಣಿಸಲು ಇಲ್ಲಿ ಒಂದು ಮುಖ್ಯವಾದ ಕಾರಣವಿದೆ. ಈ ಪ್ರಪಂಚದಲ್ಲಿರುವ ದುಷ್ಟ ಶಕ್ತಿಗಳಿಂದ ಜನರನ್ನು ಬಿಡಿಸಲು ಮತ್ತು ಬಂಧಿತರಾಗಿರುವ ಕುರುಡ ಜನರನ್ನು ಬಿಡಿಸಲು ಇದು ದೇವರು ನಿಶ್ಚಯಿಸಿದ ಮಾರ್ಗವಾಗಿದೆ. ಕ್ರಿಸ್ತನಿಗೆ ರೋಮಾ 11:26 ರಲ್ಲಿ “ಬಿಡಿಸುವವನು” ಎಂಬ ಶಿರ್ಷಿಕೆಯನ್ನು ಕೊಡಲಾಗಿದೆ. ಮತ್ತಾಯ 1:21; ಲೂಕ 4:18; ಕೊಲೊ 1:13; ತೀತ 2:14; ಇಬ್ರಿ 2:15 ಹೋಲಿಸಿರಿ. ದೇವರಿಂದ ಜನರನ್ನು ದೂರವಿಡುವದೆಲ್ಲದರಿಂದ ಆತನು ಬಿಡುಗಡೆ ಮಾಡುತ್ತಾನೆ – 5:1; ಯೋಹಾನ 8:36; ರೋಮಾ 6:17,18.

*“ದುಷ್ಟ ಪ್ರಪಂಚ”*– ಅಥವಾ “ದುಷ್ಟಯುಗ” ಈ ಯುಗದ ಆಸೆಗಳು, ಗುರಿಗಳು, ಆದರ್ಶಗಳು ಮತ್ತು ಕೆಲಸಗಳು (ಹಿಂದಿನ ಎಲ್ಲಾ ಯುಗಗಳಲ್ಲಿದ್ದಂತೆ) ಕೆಟ್ಟದಾಗಿವೆ. ಯೋಹಾನ 3:19; 7:17; ರೋಮಾ 3:19,23; 12:2; 1 ಯೋಹಾನ 2:16; 5:19. ನಮ್ಮ ಬಿಡುಗಡೆಯು ಹೀಗೆ ನೆರವೇರಿತು: ನಮ್ಮ ಪಾಪಗಳನ್ನು ತೆಗೆದು ಹಾಕಲು ಮತ್ತು ದಂಡನೆಯಿಂದ ನಮ್ಮನ್ನು ಬಿಡುಗಡೆ ಮಾಡಲು ಕ್ರಿಸ್ತನು ನಮಗಾಗಿ ಸತ್ತನು (ರೋಮಾ 8:1). ನಾವು ಪಶ್ಚಾತ್ತಾಪ ಪಟ್ಟರೆ ಮತ್ತು ಆತನಲ್ಲಿ ನಂಬಿಕೆಯಿಟ್ಟರೆ ಆತನು ನಮ್ಮನ್ನು ಕ್ಷಮಿಸುತ್ತಾನೆ ಮತ್ತು ದೇವರ ಆತ್ಮನು ನಮ್ಮಲ್ಲಿ ವಾಸಮಾಡುತ್ತಾನೆ. ಆಗ ನಮಗೆ ಈ ಪ್ರಪಂಚದ ವಿಷಯಗಳನ್ನು ತ್ಯಜಿಸಿ ದೇವರಿಗಾಗಿ ಜೀವಿಸುಲು ಬೇಕಾದ ಶಕ್ತಿ ಮತ್ತು ಬಲವನ್ನು ಹೊಂದಿಕೊಳ್ಳುತ್ತೇವೆ ಮತ್ತು ನಮ್ಮನ್ನು ಬಂಧಿಸುವ ಪ್ರಾಪಂಚಿಕ ವಿಷಯಗಳಿಂದ ಪರಿಶುದ್ಧಗೊಳಿಸುವ ಪ್ರಕ್ರೀಯೆಯನ್ನು ಕ್ರಿಸ್ತನು ಪ್ರಾರಂಭಿಸುತ್ತಾನೆ. ಅಂತಿಮವಾಗಿ ಆತನು

ನಮ್ಮನ್ನು ದುಷ್ಟತ್ವದಿಂದ ಸಂಪೂರ್ಣವಾಗಿ ಬೇರ್ಪಡಿಸಲು ಹಿಂದಿರುಗಿ ಬರುತ್ತಾನೆ. ಈ ಎಲ್ಲಾ ಕಾರ್ಯಗಳಿಗೆ ಆತನು ಪಾಪಿಗಳಿಗಾಗಿ ಮರಣ ಹೊಂದಿದ್ದೇ ಅಸ್ತಿವಾರವಾಗಿದೆ. ಅದಿಲ್ಲದಿದ್ದರೆ ಪಾರುಮಾಡಲು ಸಾಧ್ಯವಿಲ್ಲ ಮತ್ತು ಬಿಡುಗಡೆ ಇಲ್ಲ. **5**

**1:5** *"ದೇವರಿಗೆ ಯುಗಯುಗಾಂತರಗಳಲ್ಲಿಯೂ ಸ್ತೋತ್ರ"*– ರೋಮಾ 11:36; 16:27; ಎಫೆ 1:6,12,14; 2:8,9; 3:21. **6**

**1:6** *"ಬಿಟ್ಟು ಹೋಗುತ್ತಿದ್ದಾರೆ"*– ಅವರು ದೇವರ ಸತ್ಯತೆಯನ್ನು ಬಿಟ್ಟು ದೂರ ಹೋಗುತ್ತಿದ್ದಾರೆ (ಅವರನ್ನು ಕರೆದಾತನಿಂದ) ಯಾಕಂದರೆ ಅವರು ದುಷ್ಟ ಜನರಿಂದ ವಂಚಿಸಲ್ಪಟ್ಟಿದ್ದಾರೆ, ಆದರೆ ಸಂಪೂರ್ಣವಾಗಿ ಬಿಟ್ಟುಬಿಟ್ಟಿಲ್ಲ.

*"ನಿನ್ನನ್ನು ಕರೆದನು"*– ರೋಮಾ 1:6; 8:30 ಟಿಪ್ಪಣಿ ನೋಡಿರಿ.

*"ಬೇರೆ ಸುವಾರ್ತೆ"*– ಇದು ಮೋಶೆಯ ಧರ್ಮಶಾಸ್ತ್ರವನ್ನು ಅನುಸರಿಸುವುದರ ಮೂಲಕ ರಕ್ಷಣೆ ದೊರಕುತ್ತದೆ ಎಂಬ ಬೋಧನೆ (3:1-5; 4:9-11,21; 5:2-4. ಅಪೊ 15:1,5 ನೋಡಿರಿ). ಪೌಲನು ಅವರಿಗೆ ಕ್ರಿಸ್ತನ ನಿಜವಾದ ಸುವಾರ್ತೆಯನ್ನು ಬೋಧಿಸಿದ್ದನು – ರಕ್ಷಣೆಯು ದೇವರ ಉಚಿತಾರ್ಥ ವರ ಮತ್ತು ನಂಬಿಕೆಯಿಂದ ಅದನ್ನು ಸ್ವೀಕರಿಸ ಬೇಕು (ಗಲಾ 2:16; 3:6-9,26; 5:5,6. ರೋಮಾ 4:5; 6:23; ಎಫೆ 2:8,9 ಹೋಲಿಸಿರಿ). ಸುಳ್ಳು ಬೋಧಕರು ಬಂದು ತಪ್ಪಾದ ಸುವಾರ್ತೆಯನ್ನು ಬೋಧಿಸುವ ಸುಳ್ಳು ಬೋಧಕರು ಬಂದು ಕ್ರಿಸ್ತನಲ್ಲಿ ನಂಬಿಕೆಯಿಡುವುದು ಮಾತ್ರ ಸಾಕಾಗುವುದಿಲ್ಲ, ಮೋಶೆಯ ಧರ್ಮಶಾಸ್ತ್ರವನ್ನು ಸಹ ಅನುಸರಿಸಬೇಕು, ಸ್ವಂತ ಪ್ರಯತ್ನವು ರಕ್ಷಣೆ ಹೊಂದಲು ಬಹು ಮುಖ್ಯವಾದ ಪಾತ್ರವಹಿಸುತ್ತದೆ ಎಂದು ಬೋಧಿಸುತ್ತಿದ್ದರು. ಮತ್ತು ಈ ಗಲಾತ್ಯದ ಕ್ರೈಸ್ತರು ಆ ಸುಳ್ಳು ಬೋಧನೆಯ ಕಡೆಗೆ ತಿರುಗಿಕೊಳ್ಳುತ್ತಿದ್ದರು. **7**

**1:7** *"ಮತ್ತೊಂದಿಲ್ಲ"*– ಸುವಾರ್ತೆ ಎಂಬ ಪದಕ್ಕೆ "ಒಳ್ಳೆಯ ವಾರ್ತೆ" –ಎಂದು ಅರ್ಥ, ಮತ್ತು ಕ್ರೈಸ್ತರು ನಿಯಮದ ಅಡಿಯಲ್ಲಿದ್ದಾರೆ ಮತ್ತು ಅದಕ್ಕೆ ವಿಧೇಯರಾಗಿರಬೇಕೆಂಬುದು ನಿಜಕ್ಕೂ ಒಳ್ಳೆಯ ವಾರ್ತೆಯಲ್ಲ (3:10; ಅಪೊ 15:10). ಈ ಲೋಕದಲ್ಲಿ ಈ ದಿನಗಳಲ್ಲೂ ಅನೇಕ ಸುವಾರ್ತೆಗಳುಂಟು, ಆದರೆ ರಕ್ಷಣೆಯು ಕ್ರಿಸ್ತನ ಮೇಲಣ ನಂಬಿಕೆಯಿಂದಲ್ಲದೆ, ಬೇರೆ ಯಾವುದೇ ರೀತಿಯಲ್ಲಿ ಬರುತ್ತದೆಂಬ ಬೋಧನೆಯು ಸುವಾರ್ತೆಯಾಗಿರಲು ಸಾಧ್ಯವೇ ಇಲ್ಲ. ಮತ್ತು ಯಾವುದೇ ಬೋಧನೆಯು ರಕ್ಷಣೆಯ ನಂಬಿಕೆಗೆ ಬೇರೆ ಯಾವುದನ್ನೇ ಸೇರಿಸಿದರೆ (ಧಾರ್ಮಿಕ ಕಾರ್ಯಕ್ರಮ, ಕೆಲವು ಒಳ್ಳೆಯ ಕೆಲಸ, ಕೆಲವು ಸ್ವ-ಪ್ರಯತ್ನ) ಅದು ಕ್ರಿಸ್ತನ ಸತ್ಯವಾದ ಸುವಾರ್ತೆಗೆ ವಿಪರ್ಯಾಸವಾಗಿದೆ.

*"ನಿಮ್ಮಲ್ಲಿ ಕೆಲವರು ಭೇಧ ಹುಟ್ಟಿಸುವವರು"*– 4:17; 5:10,12; 6:12,13. "ನಂಬಿಕೆ ತಪ್ಪಿಸುವವರು" – ತುಲನಾತ್ಮಕವಾಗಿ ಈ ಲೋಕದಲ್ಲಿ ನೋಡುವುದಾದರೆ ಕ್ರಿಸ್ತನ ಸುವಾರ್ತೆಯನ್ನು ಇರುವ ಹಾಗೆಯೇ ಮತ್ತು ತಮ್ಮ ಅನುಕೂಲಕ್ಕೆ ಬದಲಾಯಿಸದೆ

ನಂಬುವವರು ಬಹಳ ಕೆಲವರು ಮಾತ್ರ ಇದ್ದಾರೆ. **8**

**1:8** "*ಶಾಪಗ್ರಸ್ತನು*"– ಅವನು ಬೋಧಿಸಿದ ಸುವಾರ್ತೆಯ ಮಹತ್ವವನ್ನು ತೋರಿಸಲು ಮತ್ತು ಅದನ್ನು ಬದಲಾಯಿಸಲು ಪ್ರಯತ್ನಿಸುವವರ ಭಯಂಕರ ಪಾಪವನ್ನು ತೋರಿಸಲು ಅವನು ಈ ರೀತಿಯ ಬಹು ಕಠಿಣವಾದ ಭಾಷೆಯನ್ನು ಉಪಯೋಗಿಸುತ್ತಾನೆ. ಕ್ರಿಸ್ತನೇ ಈ ಸುವಾರ್ತೆಯನ್ನು ತನಗೆ ಪ್ರಕಟಪಡಿಸಿದನೆಂದು ಅವನಿಗೆ ತಿಳಿದಿತ್ತು (ವ.11,12). ಮತ್ತು ರಕ್ಷಣೆಗೆ ಅದುವೇ ದೇವರ ಶಕ್ತಿಯಾಗಿದೆ (ರೋಮಾ 1:16). ಯಾವನಾದರು ಇದನ್ನು ತಿಳಿದೋ ತಿಳಿಯದೆಯೋ ಬದಲಾಯಿಸಲು ಪ್ರಯತ್ನಿಸಿದರೆ ಅವನು ಮನುಷ್ಯರ ರಕ್ಷಣೆಗಾಗಿ ಇರುವ ಒಂದೇ ಒಂದು ಮಾರ್ಗವನ್ನು ತೆಗೆದು ಹಾಕಲು ಪ್ರಯತ್ನಿಸುವವನಾಗಿದ್ದಾನೆ. ಮತ್ತಾಯ 23:13; ಲೂಕ 11:52 ನೋಡಿರಿ. ಇದು ಮಾನವ ಕುಲಕ್ಕೆ ಮಾಡುವ ಮಹಾ ಅಪರಾಧವಾಗಿದೆ ಮತ್ತು ದೇವರಿಗೆ ವಿರುದ್ಧವಾಗಿದೆ ಮತ್ತು ಅದನ್ನು ಖಂಡಿಸಲು ಉಪಯೋಗಿಸುವ ಯಾವ ಭಾಷೆಯು ತುಂಬಾ ಫಲವಾಗಿಲ್ಲ. ಮತ್ತು ಅದನ್ನು ಮಾಡುವವರು ತಮ್ಮ ಮೂರ್ಖತನ ಮತ್ತು ಕೆಟ್ಟತನದಿಂದ ಪಶ್ಚಾತ್ತಾಪ ಪಡದಿದ್ದರೆ ಅವರು ಮಾಡಿದ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸುತ್ತಾರೆ. **9**

**1:9** ಅವನು ಇದನ್ನು ಪುನಃ ಒತ್ತಿ ಹೇಳುತ್ತಾನೆ. ದೇವರು ಪ್ರಕಟಿಸಿದ ಸತ್ಯವನ್ನು ಯಾರು ಸಹ ಅನುಮಾನಿಸಿ ತಿದ್ದುಪಡಿ ಮಾಡಬಾರದೆಂದು ಅವನು ಬಯಸುತ್ತಾನೆ. ಪ್ರಕ 22:18-19 ಹೋಲಿಸಿರಿ. ಸುಳ್ಳು ಬೋಧಕರ ವಿಷಯವಾಗಿ ಬೇರೆ ವಾಕ್ಯ ಭಾಗಗಳು: ಮತ್ತಾಯ 7:15; 24:11; ಅಪೊ 20:29-30; ರೋಮಾ 16:17,18; 2 ಕೊರಿಂಥ 11:13-15; 1 ತಿಮೊ 4:1,2; 2 ತಿಮೊ 4:3,4; 2 ಪೇತ್ರ 2:1; ಯೂದ 4. **10**

**1:10** ಜನರು ಏನನ್ನು ಬಯಸುತ್ತಾರೋ ಅದನ್ನೇ ಬೋಧಿಸುತ್ತಾನೆಂದು ಪೌಲನ ವಿರೋಧಿಗಳು ಅವನನ್ನು ದೂಷಿಸಿದರೋ? ವಚನಗಳು 6-9 ಅವರು ಅಂದುಕೊಂಡದಕ್ಕೆ ವಿರುದ್ಧವಾದದ್ದು ಸತ್ಯ ಎಂದು ತೋರಿಸುತ್ತದೆ. ಪೌಲನು ಯಾವಾಗಲೂ ದೇವರು ಪ್ರಕಟಿಸಿದ ಸತ್ಯವನ್ನು ಬೋಧಿಸಿದನು ಮತ್ತು ಯಾರನ್ನಾದರೂ ಮನ ನೋಯಿಸುತ್ತೇನೆಂಬ ಭಯದಿಂದ ಯಾವುದನ್ನೂ ಹಿಂದಿಟ್ಟುಕೊಳ್ಳಲಿಲ್ಲ (ಅಪೊ 20:20,26,27). ಅವನ ಸಂದೇಶವನ್ನು ನೋಡುವುದಾದರೆ ಅವನು ಕ್ರಿಸ್ತನಲ್ಲದೆ ಬೇರೆ ಯಾರನ್ನೂ ಮೆಚ್ಚಿಸಲು ಪ್ರಯತ್ನಿಸಲಿಲ್ಲ. ಜನರು ಇಷ್ಟ ಪಡಲಿ ಬಿಡಲಿ ಕ್ರಿಸ್ತನ ಸಂಪೂರ್ಣವಾದ ಸಂದೇಶವನ್ನು ಬೋಧಿಸದಿದ್ದರೆ ಅವನು ಕ್ರಿಸ್ತನ ನಿಜ ಸೇವಕನಾಗಿರಲು ಸಾಧ್ಯವಿಲ್ಲವೆಂದು ಅವನು ತಿಳಿದಿದ್ದನು. ಆದರೆ ಬೇರೆ ವಿಷಯಗಳಲ್ಲಿ ಜನರನ್ನು ಕ್ರಿಸ್ತನ ಕಡೆಗೆ ನಡೆಸಲು ಅಥವಾ ಅವರನ್ನು ಕ್ರಿಸ್ತನಲ್ಲಿ ಬೆಳೆಸಲು ಅವರನ್ನು ಮೆಚ್ಚಿಸಲು ಇಚ್ಚಿಸಿದನು ರೋಮಾ 15:1-3; 1 ಕೊರಿಂಥ 9:19-23; 10:33 ನೋಡಿರಿ. ಈ ಎರಡು ಕಾರ್ಯಗಳಲ್ಲಿ ನಾವು ಅವನನ್ನು ಹಿಂಬಾಲಿಸಬೇಕು. **11**

- **1:11** 2 ಪೇತ್ರ 1:16; ಇಬ್ರಿ 2:3,4; ಅಪೊ 1:1-3,8; 2:32; ಯೋಹಾನ 7:16,17;

12:49,50; ಲೂಕ 24:45-48. **12**

**1:12** ಎಫೆ 3:2-5; ರೋಮಾ 16:25-27; 1 ಕೊರಿಂಥ 15:3; ಅಪೊ 22:14,15; 26:15,16. ಇದು ಬಹಳ ಮುಖ್ಯವಾದದ್ದು. ಪೌಲನು ಇದನ್ನು ಒತ್ತಾಯಿಸಿದನು ಯಾಕಂದರೆ ಗಲಾತ್ಯಕ್ಕೆ ಹೋದ ಸುಳ್ಳು ಬೋಧಕರು ಇದನ್ನು ನಿರಾಕರಿಸಿದರು. ಸತ್ಯದ ವಿಷಯವಾಗಿ ಅವನು ಊಹಿಸುತ್ತಿರಲಿಲ್ಲವೆಂದು ಅವನಿಗೆ ತಿಳಿದಿತ್ತು. ಮನುಷ್ಯರಿಂದ ಕೇಳಿಸಿಕೊಂಡದ್ದನ್ನಾಗಲೀ ಮತ್ತು ಅಪಾರ್ಥಮಾಡಿಕೊಂಡದ್ದಾಗಲೀ ಅವನು ತಿಳಿಸುತ್ತಿರಲಿಲ್ಲ. ಕ್ರಿಸ್ತನು ತಾನೇ ಸತ್ಯವನ್ನು ಅವನಿಗೆ ಪ್ರಕಟಿಸಿದನು ಮತ್ತು ಅದರಿಂದಾಗಿ ಅವನು ಸಂಪೂರ್ಣ ಅಧಿಕಾರದಿಂದ ಮಾತನಾಡಬಹುದಾಗಿತ್ತು. ಅವನು ಬೋದಿಸಿದ ಸುವಾರ್ತೆಯನ್ನು ಬೇರೆ ಸುವಾರ್ತೆ ಎನಿಸಿಕೊಳ್ಳುವುದರೊಂದಿಗೆ ಅದು ಸತ್ಯವೋ ಇಲ್ಲವೋ ಎಂದು ಹೋಲಿಸಬೇಕಾಗಿರಲಿಲ್ಲ. ( ಆದರೆ ನಾವು ಬೋಧಿಸುವ ಸುವಾರ್ತೆಯನ್ನು ಪೌಲನು ಬೋಧಿಸಿದ ಸುವಾರ್ತೆಯೊಂದಿಗೆ ಹೋಲಿಸಬೇಕು. ನಮ್ಮದು ಅವನ ಹಾಗಿಲ್ಲದಿದ್ದರೆ, ಅದು ನಿಜವಾದ ಸುವಾರ್ತೆಯಲ್ಲ.) 2 ಕೊರಿಂಥ 1:12-14 ಸಹ ನೋಡಿರಿ. **13,14**

- **1:13,14** ಅಪೊ 7:58; 8:1-3; 9:1-2; ಫಿಲಿಪ್ಪಿ 3:4-6; 1 ತಿಮೊ 1:13. **15**

**1:15** *"ನನ್ನ ತಾಯಿಯ ಗರ್ಭದಲ್ಲಿದ್ದಾಗಲೇ"*– ಯೆರೆ 1:5; ಯೋಹಾನ 15:16 ಹೋಲಿಸಿರಿ.

*"ತನ್ನ ಕೃಪೆಯಿಂದ ಕರೆದ. . ."*– ವ.6. ಪೌಲನು ಹುಟ್ಟಿ ಅನೇಕ ವರ್ಷಗಳ ನಂತರ ದೇವರು ಅವನನ್ನು ಕರೆದನು ಮತ್ತು ಹುಟ್ಟಿದ ದಿನದಿಂದಲೂ ಅವನನ್ನು ಪ್ರತ್ಯೇಕಿಸಿದ ಆತನ ಉದ್ದೇಶವನ್ನು ನೆರವೇರಿಸಲು ಪ್ರಾರಂಭಿಸಿದನು. **16**

**1:16** ಪೌಲನಿಗೆ ಕ್ರಿಸ್ತನು ತಾನೇ ಪ್ರಕಟಗೊಂಡನು (ಅಪೊ 9:3,4; 1 ಕೊರಿಂಥ 9:1). ಆದರೆ ಇಲ್ಲಿ ಕ್ರಿಸ್ತನಲ್ಲಿ ದೇವರ ಉದ್ದೇಶ ಪ್ರಕಟವಾಗಬೇಕೆಂದು ಮಾತಾಡುತ್ತಾನೆ. ಕ್ರಿಸ್ತನು ಜೀವಿಸುತ್ತಿದ್ದಾನೆ ಮತ್ತು ಅವನಲ್ಲಿ ಕೆಲಸ ಮಾಡುತ್ತಿದ್ದಾನೆಂದು ಪೌಲನು ಅರ್ಥಮಾಡಿಕೊಂಡಿದ್ದನು ಮತ್ತು ಅವನು ಕ್ರಿಸ್ತನನ್ನು ಇತರರಿಗೆ ತೋರಿಸುವವನಿದ್ದನು (2:20; 2 ಕೊರಿಂಥ 4:10,11; ಕೊಲೊ 1:29). ವಿಶ್ವಾಸಿಗಳೆಲ್ಲರಿಗೂ ಇದು ದೇವರ ಉದ್ದೇಶವಾಗಿದೆ.

*"ಅನ್ಯಜನರು"*– ಗಲಾ 2:7; ಅಪೊ 22:21; 26:17,18; ಎಫೆ 3:8. ಹೊಸ ಒಡಂಬಡಿಕೆಯಲ್ಲಿ "ಅನ್ಯಜನರು" ಎಂದರೆ ಯೆಹೂದ್ಯರಲ್ಲದ ಜನರು. **17**

**1:17** ಈ ಒಂದು ಸ್ಥಳದಲ್ಲಿ ಮಾತ್ರ ಅರೇಬಿಯದ ಪ್ರಯಾಣದ ಬಗ್ಗೆ ಹೊಸ ಒಡಂಬಡಿಕೆಯು ಮಾತಾಡುತ್ತದೆ. ಅಪೊ 9:19-22 ವಿವರಿಸಲ್ಪಟ್ಟಿರುವ ಘಟನೆಗಳ ಸ್ಥಳಗಳ ಬಗ್ಗೆ ಕೆಲವು ಸಾರಿ ಹೇಳಲ್ಪಟ್ಟಿದೆ. ಯಾಕೆ ಅಲ್ಲಿಗೆ ಹೋದನೆಂದು ಪೌಲನ ನಮಗೆ ತಿಳಿಸಿಲ್ಲ, ಆದರೆ ಅವನು ಪ್ರಾರ್ಥಿಸಲು ಮತ್ತು ಕ್ರಿಸ್ತನೊಂದಿಗೆ ಅನ್ಯೋನ್ಯತೆಯನ್ನು ಹೊಂದಲು,

ಮತ್ತು ಯೋಚಿಸಲು, ಧ್ಯಾನಿಸಲು ಅಲ್ಲಿಗೆ ಹೋಗಿರಬಹುದೆಂದು ತೋರುತ್ತದೆ. ಅವನು ಯಾರ ಸಲಹೆಯನ್ನು ಪಡೆಯಲಿಲ್ಲ (ವ.16); ಅವನು ದೇವರ ಸಲಹೆಯನ್ನು ಪಡೆಯಬೇಕೆಂದಿದ್ದನು. **18,19**

**1:18,19** ಅಪೊ 9:26-30. ಬೇರೆ ಅಪೋಸ್ತಲರು ಆ ಸಮಯದಲ್ಲಿ ಯೆರುಸಲೇಮಿನಲ್ಲಿ ಇರಲಿಲ್ಲವೆಂದು ತೋರುತ್ತದೆ. ಪೇತ್ರನು ಮತ್ತು ಯಾಕೋಬನು ಅವನನ್ನು ಆಹ್ವಾನಿಸಿದ್ದರೆ ಅಲ್ಲಿದ್ದ ಬೇರೆಯವರು ಸಹ ಹಾಗೆ ಮಾಡಿರುತ್ತಾರೆಂದು ಯೋಚಿಸಲು ಸರಿಯಾದ ಕಾರಣವಿದೆ. **20**

**1:20** ಅವನು ಇದನ್ನು ಗಂಭೀರವಾಗಿ ಪರಿಗಣಿಸುತ್ತಾನೆ ಯಾಕಂದರೆ ಅವರು ಸತ್ಯ ಸುವಾರ್ತೆಯನ್ನು ಅಂಗೀಕರಿಸುವುದು ಕಷ್ಟವಾಗುವದರಲ್ಲಿತ್ತು. ಅವರು ಅವನ ಮಾತನ್ನು ನಂಬದಿದ್ದರೆ ಅವರು ಪ್ರಾರಂಭಿಸಿದ್ದನ್ನೇ ಮುಂದುವರಿಸಬಹುದಾಗಿತ್ತು ವ.6. **21**

**1:21** ಅಪೊ 9:30; 11:25,26. ತಾರ್ಸವು ಕಿಲಿಕ್ಯದಲ್ಲಿತ್ತು (ಈಗ ಟರ್ಕಿಯೆಂದು ಕರೆಯಲ್ಪಡುವ ಒಂದು ಭಾಗವಾಗಿದೆ). ಅಂತಿಯೋಕ್ಯವು ಸಿರಿಯದಲ್ಲಿತ್ತು. **22**

**1:22** ಪೌಲನ ಕೆಲಸವು ಬೇರೆ ಪ್ರಾಂತ್ಯದಲ್ಲಿತ್ತು ಮತ್ತು ಯೆರುಸಲೇಮಿನಲ್ಲಿ ಬಹಳ ಕಡಿಮೆ ಸಮಯ ಕಳೆದನು. ಆದ್ದರಿಂದ ಯೂದಾಯದಲ್ಲಿದ್ದ ಅನೇಕ ಕ್ರೈಸ್ತರಿಗೆ ಅವನೊಂದಿಗೆ ವಯಕ್ತಿಕವಾದ ಪರಿಚಯವಿರಲಿಲ್ಲ. **23,24**

**1:23,24** ಪೌಲನಲ್ಲಾದ ಬದಲಾವಣೆಯ ವಿಷಯವು ಅವರಿಗೆ ತಿಳಿದಿತ್ತು ಆದರೆ ಅದಕ್ಕಾಗಿ ಅವರು ಪೌಲನನ್ನು ಹೊಗಳಲಿಲ್ಲ. ಪೌನಲನನ್ನು ಬದಲಾಯಿಸಿದ ದೇವರನ್ನು ಸ್ತುತಿಸಿದರು. ಪೌಲನು ಸಹ ಎಲ್ಲದರ ಮೇಲೆ ಇದನ್ನೇ ಬಯಸಿದನು (1 ಕೊರಿಂಥ 3:4-7; ಎಫೆ 1:6,12,14; ಫಿಲಿಪ್ಪಿ 1:11).

# 2 1-10

**2:1-10** 1ನೇ ಅಧ್ಯಾಯದಲ್ಲಿ ಪರಿಚಯಿಸಿದ ವಿಷಯವನ್ನೇ ಪೌಲನು ಮುಂದುವರಿಸುತ್ತಾನೆ. ದೇವರು ನನ್ನನ್ನು ಅಪೋಸ್ತಲನಾಗಿ ಕರೆದನು ಮತ್ತು ಸುವಾರ್ತೆಯನ್ನು ನನಗೆ ಪ್ರಕಟಿಸಿದನೆಂದು ಅಲ್ಲಿ ಹೇಳುತ್ತಾನೆ. ಬೇರೆ ಅಪೋಸ್ತಲರು ಸಹ ನನ್ನನ್ನು ಅಪೋಸ್ತಲನೆಂದು ಸ್ವೀಕರಿಸಿದರು ಮತ್ತು ಅವರು ಪ್ರಸಂಗಿಸಿದ ಸುವಾರ್ತೆಯನ್ನೇ ನಾನು ಪ್ರಸಂಗಿಸುತ್ತಿದ್ದೇನೆಂದು ಗುರುತಿಸಿದರು ಎಂದು ಹೇಳುತ್ತಾನೆ. **1**

**2:1** *“ಬಾರ್ನಬ”*– ಅಪೊ 4:36; 9:27; 11:25,30; 12:25; 13:2; 15:2.
*“ತೀತ”*– 2 ಕೊರಿಂಥ 2:13; 7:6; 2 ತಿಮೊ 4:10; ತೀತ 1:4. **2**

**2:2** *“ಒಂದು ಪ್ರಕಟನೆ”*– ದೇವರಿಂದ ಒಂದು ಪ್ರಕಟನೆ.
*“ಏಕಾಂತದಲ್ಲಿ”*– ಸುವಾರ್ತೆಯ ವಿಷಯವಾಗಿ ಯೆರುಸಲೇಮಿನ ಸಭೆಯ ನಾಯಕರೊಂದಿಗೆ

ಬಹಿರಂಗವಾಗಿ ವಾಗ್ವಾದ ಮಾಡಲು ಪೌಲನು ಇಚ್ಛಿಸಲಿಲ್ಲ. ಸುವಾರ್ತೆಯ ವಿಷಯವನ್ನು ಅವರು ಏಕಾಂತದಲ್ಲಿ ಒಪ್ಪಿಕೊಳ್ಳುತ್ತಾರೆಂಬ ನಿರೀಕ್ಷೆಯನ್ನು ಅವನು ಹೊಂದಿದ್ದನು, ನಂತರ ಈ ಒಪ್ಪಿಗೆಯನ್ನು ಬಹಿರಂಗ ಪಡಿಸಬಹುದು. ಮತ್ತು ಹೀಗೆಯೇ ನಡೆಯಿತು.

"*ನಿಷ್ಫಲವಾಗಬಾರದೆಂದು*"– ತನ್ನಲ್ಲಿ ನಿಜವಾದ ಸುವಾರ್ತೆಯು ಇಲ್ಲವೆಂದು ಪೌಲನು ಭಯಪಡಲಿಲ್ಲ. ಅವನಲ್ಲಿ ಇರುವುದು ಅವನಿಗೆ ಚೆನ್ನಾಗಿ ಗೊತ್ತಿತ್ತು (1:12). ಆದರೆ ಬೇರೆ ಅಪೋಸ್ತಲರು ಅವನನ್ನು ವಿರೋಧಿಸುತ್ತಾರೆಂಬ ಭಯವಿತ್ತು ಮತ್ತು ಅವನು ಪ್ರಸಂಗಿಸಿದ ಸುವಾರ್ತೆಯನ್ನು ಅವರು ನಿರಾಕರಿಸಿದರೆ ಅನ್ಯಜನರ ಮಧ್ಯದಲ್ಲಿ ಅವನು ಮಾಡುತ್ತಿದ್ದ ಕೆಲಸವು ನಾಶವಾಗುತ್ತಿತ್ತು. **3**

**2:3** ಸುನ್ನತಿಯು ಆ ದಿನಗಳಲ್ಲಿ ಬಹು ಮುಖ್ಯವಾದ ಸಮಸ್ಯೆಯಾಗಿತ್ತು – ವ. 12; 5:2,3,6,11; 6:12-15; ಅಪೊ 15:1-5; ರೋಮಾ 4:9-16. ಪ್ರಶ್ನೆ ಏನೆಂದರೆ ಕ್ರೈಸ್ತರಾದ ಅನ್ಯಜನರು ಮತಾಂತರ ಹೊಂದಿ ಯೆಹೂದ ಮತಕ್ಕೆ ಬಂದಾಗ, ಸುನ್ನತಿಯನ್ನು ಸ್ವೀಕರಿಸಿ ಮೋಶೆಯ ನಿಯಮಗಳನ್ನು ಅನುಸರಿಸಬೇಕೋ? ಅದಕ್ಕೆ ಪೌಲನು ಮತ್ತು ಇತರ ಅಪೋಸ್ತಲರು ಕೊಟ್ಟ ಉತ್ತರ "ಇಲ್ಲ". ಇದಕ್ಕೆ ಉದಾಹರಣೆ ತೀತನು. ಅವನು ಅನ್ಯಜನಾಂಗಕ್ಕೆ ಸೇರಿದ ಕ್ರೈಸ್ತನಾಗಿದ್ದನು ಮತ್ತು ಯೆರುಸಲೇಮಿನಲ್ಲಿದ್ದ ಅಪೋಸ್ತಲರು ಅವನು ಸುನ್ನತಿ ಹೊಂದಿರದಿದ್ದರೂ ಅವನನ್ನು ಕ್ರಿಸ್ತನ ನಿಜ ಹಿಂಬಾಲಕನೆಂದು ಒಪ್ಪಿಕೊಂಡಿದ್ದರು. **4**

**2:4** ಈ " ಸುಳ್ಳು ಸಹೋದರರು" ಇವರು ಯೆಹೂದ್ಯರಾಗಿದ್ದರು ಮತ್ತು ಯೆರುಸಲೇಮಿನ ವಿಶ್ವಾಸಿಗಳು ಇವರನ್ನು ವಿಶ್ವಾಸಿಗಳೆಂದು ಪರಿಗಣಿಸಿದ್ದರು. ಎಲ್ಲಾ ಕ್ರೈಸ್ತರನ್ನು, ಯೆಹೂದ್ಯರು ಅಥವಾ ಅನ್ಯ ಜನರನ್ನು ಮೋಶೆಯ ನಿಯಮ ಕೆಳಗೆ ಬಂದಿಗಳಾಗಿ ಮಾಡಬೇಕೆಂಬುದೇ ಈ ಯೆಹೂದ್ಯರ ಗುರಿಯಾಗಿತ್ತು. ಯೇಸುವು ಬಂದ ಒಂದು ಕಾರಣ ಜನರನ್ನು ಈ ನಿಯಮದಿಂದ ಮುಕ್ತಗೊಳಿಸಲು ಎಂಬುದು ಪೌಲನಿಗೆ ತಿಳಿದಿತ್ತು. ನಿಜವಾದ ಪ್ರಶ್ನೆ ಏನೆಂದರೆ, ಜನರು ರಕ್ಷಣೆಯನ್ನು ಹೇಗೆ ಪಡೆಯಬಹುದು – ನಿಯಮಕ್ಕೆ ವಿಧೇಯರಾಗುವುದರ ಮೂಲಕ ಅಥವಾ ದೇವರ ಕೃಪೆಯಿಂದಲೋ? ಉತ್ತರವು ಬಹಳ ಸರಳವಾಗಿದೆ – 5:1-4; ಅಪೊ 13:38-39; 15:10-11; ರೋಮಾ 3:24-28; 6:14; 7:4. **5**

**2:5** ಸುಳ್ಳು ಬೋಧಕರಿಗೆ ಸ್ವಲ್ಪ ಸಮಯ ಕಿವಿಗಟ್ಟರೂ ಅದರ ಪರಿಣಾಮವು ಗಲಾತ್ಯದ ಸಭೆಗೆ ಎಷ್ಟು ನಷ್ಟವಾಗುತ್ತದೆಂದು ಪೌಲನು ತಿಳಿದಿದ್ದನು. ಮತ್ತು ಅವನು ಯಾವುದೇ ಕಾರ್ಯವನ್ನು ಮಾಡಿದರೂ ಅದು ಜನರ ಮೇಲೆ ಪರಿಣಾಮ ಭೀರುತ್ತದೆಂದು ತಿಳಿದು ಯೋಚಿಸಿ ಮಾಡುತ್ತಿದ್ದನು. **6-9**

**2:6-9** ಪೌಲನು ಜನರನ್ನು, ತನ್ನನ್ನೂ ಅಥವಾ ಯಾರನ್ನೇ ಆಗಲಿ ಎಂದಿಗೂ

ಹೊಗಳುತ್ತಿರಲಿಲ್ಲ – 1 ಕೊರಿಂಥ 3:5,22,23. ಈ ವಿಷಯದಲ್ಲಿ, ಅವನಿಗೆ ಬಹು ಮುಖ್ಯವಾದದ್ದು ಜನರು ಏನು ಅಂದುಕೊಳ್ಳುತ್ತಾರೆ ಅಥವಾ ಅವರು ಹೊಂದಿರುವ ಸವಲತ್ತಾಗಲೀ ಅಥವಾ ಅವರು ಹೊಂದಿರುವ ದೊಡ್ಡ ಪದವಿಯಾಗಲೀ ಅಥವಾ ಬೇರೆಯವರೊಂದಿಗೆ ಅವರಿಗಿರುವ ಖ್ಯಾತಿಯಾಗಲೀ ಅಲ್ಲ. ಅವನಿಗಿದ್ದ ಒಂದೇ ಕಾಳಜಿ ಅದೇನೆಂದರೆ ಅವರು ತನಗೆ ಪ್ರಕಟಣೆಯಾದ ಸುವಾರ್ತೆಯನ್ನು ಕ್ರಿಸ್ತನ ನಿಜ ಸುವಾರ್ತೆ ಎಂದು ಸ್ವೀಕರಿಸಿದರೋ ಇಲ್ಲವೋ ಎಂಬುದಾಗಿತ್ತು. ಮತ್ತು ಗಲಾತ್ಯ ಸಭೆಗಳಿಗೆ ಪೇತ್ರ, ಯಾಕೋಬ ಮತ್ತು ಯೋಹಾನ, ಯೆರೂಸಲೇಮಿನ ಸಭೆಯ ನಾಯಕರು ಸುವಾರ್ತೆಯ ಅರ್ಥದ ಬಗ್ಗೆ ಅವನೊಂದಿಗೆ ಒಪ್ಪಿಕೊಂಡಿದ್ದಾರೆಂದು ತಿಳಿಸುವುದಾಗಿತ್ತು (ವ.9). ವಚನಗಳು 7,8,9 ರಲ್ಲಿ "ಸುನ್ನತಿಯಿಲ್ಲದವರು" "ಸುನ್ನತಿಯಾದವರು" ಎಂಬ ಪದಗಳು ಅನ್ಯಜರನ್ನು ಮತ್ತು ಯೆಹೂದ್ಯರನ್ನು ಸೂಚಿಸುತ್ತವೆ. ಆ ದಿನಗಳಲ್ಲಿ ಅನೇಕ ವೇಳೆ ಈ ಎರಡು ಗುಂಪಿನ ಬಗ್ಗೆ ಹೀಗೆ ಮಾತನಾಡುತ್ತಿದ್ದರು. **10**

**2:10** ಅನ್ಯ ಜನರ ಬಳಿಗೆ ಪೌಲನು ಸುವಾರ್ತೆಯನ್ನು ತೆಗೆದುಕೊಂಡು ಹೋದಾಗ, ಯೂದಾದಲ್ಲಿರುವ ಯೆಹೂದ್ಯ ಕ್ರೈಸ್ತರ ದೈಹಿಕ ನೀಡಿಕೆಗಳ ಬಗ್ಗೆ ಮರೆಯಬಾರದೆಂದು ಬೇರೆ ಅಪೋಸ್ತಲರು ಅವನಿಗೆ ಹೇಳಿದರು. ಅಲ್ಲಿರುವ ಬಡವರ ನೀಡಿಕೆಗಳಿಗೆ ಸಹಾಯ ಮಾಡಬೇಕೆಂದು ಪೌಲನು ತಾನೇ ಅದರ ವಿಷಯವಾಗಿ ಆಸಕ್ತಿಯಿಂದಿದ್ದನು – ಅಪೊ 24:17; ರೋಮಾ 15:25-28; 1 ಕೊರಿಂಥ 16:1-4 . 2 ಕೊರಿಂಥದ 8 ಮತ್ತು 9 ಅಧ್ಯಾಯಗಳು ಆಳವಾದ ದೈವಶಾತ್ರದ ಚರ್ಚೆಯ ನಡುವೆಯೂ ಬಡವರಿಗೆ ಸಹಾಯ ಮಾಡುವವುದರ ಬಗ್ಗೆಯ ಪದಗಳು ಈ ಒಂದು ಸೇವೆಯ ಮಹತ್ವಕ್ಕೆ ಅವರೆಲ್ಲರ ಆಸಕ್ತಿಯನ್ನು ತೋರಿಸುತ್ತದೆ. ವಿಮೋ 23:11; ಧರ್ಮೋ 15:7,8; ಕೀರ್ತನೆ 41:1; ಜ್ಞಾನೋ 14:31; 19:17; 21:13; 29:7; 31:9; ಮತ್ತಾಯ 19:21; 2 ಕೊರಿಂಥ 9:9. **11-21**

**2:11-21** ಈ ಭಾಗದಲ್ಲಿ ಪೌಲನು ತನ್ನ ಅಪೋಸ್ತಲತನವನ್ನು ಸಮರ್ಥಿಸಿಕೊಳ್ಳುವುದನ್ನು ಮುಂದುವರಿಸುತ್ತಾನೆ. ಕ್ರಿಸ್ತನು ತನಗೆ ಸುವಾರ್ತೆಯನ್ನು ಪ್ರಕಟಿಸಿದರ ಬಗ್ಗೆ ಸಂಪೂರ್ಣ ಖಚಿತದಿಂದಿದ್ದನು (1:12). ಆದ್ದರಿಂದ ಯಾರೇ ಈ ಸತ್ಯದ ಬಗ್ಗೆ ಅನುಮಾನ ಬರುವ ರೀತಿಯಲ್ಲಿ ಮಾತಾಡಿದರೂ ಅಥವಾ ಏನೇ ಮಾಡಿದರೂ ಅವರ ವಿರುದ್ಧವಾಗಿ ಬಹಿರಂಗವಾಗಿ ನಿಲ್ಲಲು ಸಿದ್ಧನಿದ್ದನು. ಕ್ರಿಸ್ತನ ಮೂಲ ಅಪೋಸ್ತರಲ್ಲಿ ಪೇತ್ರನು ಅವರ ನಾಯಕನಾಗಿದ್ದನು. ಅವನು ಒಳ್ಳೆಯ ವ್ಯಕ್ತಿಯಾಗಿದ್ದನು ಮತ್ತು ದೇವರಿಂದ ಬಹಳವಾಗಿ ಉಪಯೋಗಿಸಲ್ಪಟ್ಟವನು (ಅಪೋಸ್ತಲರಕೃತ್ಯಗಳ ಅಧ್ಯಾಯಗಳು 2-11). ಆದರೆ ಅವನು ಪರಿಪೂರ್ಣ ವ್ಯಕ್ತಿಯಾಗಿರಲಿಲ್ಲ ಮತ್ತು ಒಂದು ಸಮಯದಲ್ಲಿ ಪೌಲನು ಸುವಾರ್ತೆಯ ಸಲುವಾಗಿ ಮುಖದಾಕ್ಷಣವಿಲ್ಲದೆ ಅವನನ್ನು ಗದರಿಸಿದನು. **11**

**2:11** ಪೇತ್ರನು ಅಂತಿಯೋಕ್ಯಕ್ಕೆ ಯಾವಾಗ ಬಂದನೆಂದು ಅಥವಾ ಅವನ ಬೇಟಿಯ

ಉದ್ದೇಶವು ನಮಗೆ ಗೊತ್ತಿಲ್ಲ. ಆ ಸಮಯದಲ್ಲಿ ಅಂತಿಯೋಕ್ಯವು ಏಷ್ಯಾದ ಆ ಭಾಗದಲ್ಲಿ ಬಹುದೊಡ್ಡ ಪಟ್ಟಣವಾಗಿತ್ತು ಮತ್ತು ಅನ್ಯ ಕ್ರೈಸ್ತರ ಕೇಂದ್ರವಾಗಿತ್ತು (ಅಪೊ 11:19-26; 13:1-3). **12**

**2:12** *"ಯಾಕೋಬನ ಕಡೆಯಿಂದ"*– ಯಾಕೋಬನು ಜನರನ್ನು ಕಳುಹಿಸಿದನೆಂದು ಇದರ ಅರ್ಥವಲ್ಲ; ಯಾಕೋಬನು ನಾಯಕನಾಗಿದ್ದ ಯೆರೂಸಲೇಮಿನ ಸಭೆಯಿಂದ ಅವರು ಹೊರಟರು ಎಂದು ಇದರ ಸರಳ ಅರ್ಥವಾಗಿದೆ. ಅಪೊ 15:13,20,24 ಹೋಲಿಸಿರಿ. ಯಾಕೋಬ, ಪೇತ್ರ ಮತ್ತು ಯೋಹಾನ ಅವನ ಸುವಾರ್ತೆಯನ್ನು ಒಪ್ಪಿಕೊಂಡಿದ್ದೇವೆಂದು ತೋರಿಸಲು ಆಗಲೇ ಪೌಲನಿಗೆ ಅನ್ಯೋನ್ಯತೆಯ ಬಲಗೈಯನ್ನು ಕೊಟ್ಟಿದ್ದರು (ವ.9). ಅಂತಿಯೋಕ್ಯಕ್ಕೆ ಬಂದ ಜನರನ್ನು ಪೌಲನು ಇಲ್ಲಿ "ಸುನ್ನತಿ ಹೊಂದಿರುವವರು" ಎಂಬುದಾಗಿ ಕರೆಯುತ್ತಾನೆ. ಕ್ರಿಸ್ತನನ್ನು ನಂಬಿದ ಯೆಹೂದ್ಯರು ಮೋಶೆಯ ಧರ್ಮಶಾಸ್ತ್ರವನ್ನು ಮತ್ತು ರೀತಿ ನಿಯಮಗಳನ್ನು ಮುಂದುವರಿಸಬೇಕೆಂದು ಬೋಧಿಸುವ ಯೆಹೂದ್ಯ ಕ್ರೈಸ್ತರಾಗಿದ್ದರು. ಯೆಹೂದ್ಯರ ರೀತಿ ನೀತಿಗಳನ್ನು ಅನ್ಯಜನರು ಅನುಸರಿಸದಿದ್ದರೆ ಅವರೊಂದಿಗೆ ಊಟಮಾಡುವುದು ಸರಿಯಲ್ಲವೆಂದು ಅವರು ಯೋಚಿಸಿದರು. ಪೇತ್ರನು ಈ ವರ್ತನೆಯು ತಪ್ಪೆಂದು ಅರಿತುಕೊಂಡನು (ಅಪೊ 10:27-29; 11:2-17). ಆದ್ದರಿಂದ ಅವನು ಅಂತಿಯೋಕ್ಯದ ಅನ್ಯ ವಿಶ್ವಾಸಿಗಳೊಂದಿಗೆ ಊಟಮಾಡಿದನು. ಆದರೆ "ಸುನ್ನತಿ"–ಗುಂಪು ಅಲ್ಲಿಗೆ ಬಂದಾಗ ಹೀಗೆ ಮಾಡುವುದನ್ನು ನಿಲ್ಲಿಸಿದನು. ದೇವರಾತ್ಮನಿಂದ ಪೇತ್ರನು ತುಂಬಿಸಲ್ಪಟ್ಟಾಗ ಅವನು ಬಹಳ ಧೈರ್ಯದಿಂದಿರುತ್ತಿದ್ದನು (ಅಪೊ 2:4,14,36; 4:18-20,31; 5:29-33,41,42), ಆದರೆ ಅವನು ಸಾಧಾರಣವಾಗಿದ್ದಾಗ ಬಹಳ ಸುಲಭವಾಗಿ ಭಯಪಡುತ್ತಿದ್ದನು (ಮತ್ತಾಯ 26:69-75 ಹೋಲಿಸಿರಿ). ಮತ್ತು ಜ್ಞಾನೋ 29:25 ರ ವಾಕ್ಯವು ಎಷ್ಟು ಸತ್ಯವಾಗಿದೆ! **13**

**2:13** *"ಕಪಟ ಮಾಡಿದರು"*– ಪೇತ್ರನ ನಡತೆಗೆ ಪೌಲನು ಕೊಟ್ಟ ಹೆಸರು. ಇದು ಯಾಕಂದರೆ ಪೇತ್ರನು ಬೇರೆ ರೀತಿಯಲ್ಲಿ ನಡೆದುಕೊಂಡನು (ಅನ್ಯ ವಿಶ್ವಾಸಿಗಳೊಂದಿಗೆ ಊಟಮಾಡುವುದು ಸರಿ), ಆದರೆ ಅವನು ಬೇರೆ ಯಾವುದನ್ನೋ ನಂಬಿದ ಹಾಗೆ ನಡೆದುಕೊಂಡನು (ಅವರೊಂದಿಗೆ ಊಟಮಾಡುವುದು ತಪ್ಪು). ಈ ರೀತಿಯಾಗಿ ಬೇರೆಯವರ ಭಯ ಅಥವಾ ಅವರ ಅನುಮೋಧನೆಗೆ ಆಶಿಸುವುದು ಎಂಥಹ ಮಹಾ ದೇವರ ಮನುಷ್ಯರನ್ನು ಕಪಟತನಕ್ಕೆ ಬೀಳಿಸುತ್ತದೆ. ಯೆಹೂದ್ಯ ಕ್ರೈಸ್ತರ ಸ್ವಂತ ಸ್ಥಳ ಅಂತಿಯೋಕ್ಯವಾಗಿತ್ತು ಮತ್ತು ಬಾರ್ನಬನು, ಒಳ್ಳೆಯ ಮನುಷ್ಯನೂ ಸಹ ಇದೇ ಪಾಪದಲ್ಲಿ ಬಿದ್ದನು – ಮತ್ತು ನಿಜವಾಗಿಯೂ ಇದು ಪಾಪವಾಗಿತ್ತು ಅಪೊ 11:24. **14**

**2:14** ಸನ್ನಿವೇಶವು ಬಹು ಗಂಭೀರವಾಗಿರುವುದನ್ನು ಪೌಲನು ಕಂಡನು. ಪೇತ್ರನಿಗೆ ಸತ್ಯ ಯಾವುದೆಂದು ಚೆನ್ನಾಗಿ ತಿಳಿದಿತ್ತು, ಆದರೆ ಅವನು ಅವನಿಗೆ ತಿಳಿದಿದ್ದ ಸತ್ಯಕ್ಕನುಗುಣವಾಗಿ

ನಾಟಕವಾಡುತ್ತಿರಲಿಲ್ಲ. ಅವನ ನಡೆತೆಯು ಸುವಾರ್ತೆಯ ನಿಜವಾದ ಅರ್ಥದ ಮೇಲೆ ಅನುಮಾನಬರುವಂತಾಗಿತ್ತು, ಬೇರೆಯವರ ಮಾತುಗಳು ಹೇಗೆ ಮಾಡಿದ್ದವೋ ಹಾಗೆ (ಅಪೊ 15:1,5).

*"ಅನ್ಯಜನರಂತೆ ಜೀವಿಸು"*– ಪೇತ್ರನು ತಾನೇ ಯೆಹೂದ್ಯರ ನೇಮ ನಿಷ್ಠೆಯ ಪ್ರಕಾರ ನಡೆಯುತ್ತಿಲ್ಲವೆಂಬುದು ಪೌಲನ ಅರ್ಥವಾಗಿತ್ತು.

*"ಬಲತ್ಕಾರ ಮಾಡುವುದು"*– ಪೇತ್ರನು ಅನ್ಯಜನರನ್ನು ಬಾಯಿಯ ಮಾತುಗಳಿಂದ ಬಲವಂತ ಪಡಿಸಿತ್ತಿರಲಿಲ್ಲ, ಆದರೆ ಅವನ ನಡತೆಯಿಂದ ಅವರ ಮೇಲೆ ಒತ್ತಡ ತರುತ್ತಿದ್ದನು. ಆದ್ದರಿಂದ ಪೌಲನು ಅವನನ್ನು ಸತ್ಯದ ಸಲುವಾಗಿ ಅವನನ್ನು ಗದರಿಸಬೇಕಾಯಿತು. ನಂತರ ವಚನಗಳು 15-21 ರಲ್ಲಿ ಸುವಾರ್ತೆಯ ಅರ್ಥವನ್ನು ಸ್ಥಿರಪಡಿಸುತ್ತಾನೆ. ಅವನ ಮಿಕ್ಕ ಎಲ್ಲಾ ಪತ್ರಿಕೆಗಳಿಗೆ ಈ ವಚನಗಳೆ ಅಸ್ತಿವಾರವಾಗಿದೆ. **15**

**2:15** ಪೌಲನು ಸಹ ಹುಟ್ಟಿನಿಂದ ಯೆಹೂದ್ಯನಾಗಿದ್ದನು ಮತ್ತು ಆ ಒಂದು ಕೋನದಿಂದ ಈಗ ಮಾತನಾಡುತ್ತಿದ್ದಾನೆ. **16**

**2:16** ಯೆಹೂದ್ಯ ಕ್ರೈಸ್ತ ನಾಯಕರು ಬಹು ಮೂಲಭೂತ ಮತ್ತು ಮುಖ್ಯವಾದ ಸತ್ಯವನ್ನು ಕಲಿತುಕೊಂಡರೆಂದು ಅವನು ಹೇಳುತ್ತಾನೆ – ದೇವರು ಮೋಶೆಯ ಮೂಲಕ ಕೊಟ್ಟ ಧರ್ಮಶಾಸ್ತ್ರದ ಮೂಲಕ ರಕ್ಷಣೆಯು ಸಿಕ್ಕುವುದಿಲ್ಲ. ಪಾಪಿಗಳಾದ ಯೆಹೂದ್ಯರಾಗಲೀ ಅಥವಾ ಅನ್ಯಜನಗಳಾಗಲೀ ಕ್ರಿಸ್ತನ ಮೇಲಿನ ನಂಬಿಕೆಯಿಂದ ಮಾತ್ರ ನೀತಿವಂತರಾಗುತ್ತಾರೆ (ಅಪೊ 13:38,39; ರೋಮಾ 3:24-26,28,30; 5:1 ಹೋಲಿಸಿರಿ). ಕ್ರೈಸ್ತರು ಯಾವುದೇ ನೇಮ ನಿಷ್ಟೆಗಳನ್ನು ಅನುಸರಿಸಬೇಕೆಂಬ ಒತ್ತಡದ ಯೋಚನೆಯು ಸುವಾರ್ತೆಯ ಕೇಂದ್ರ ಭಾಗದಲ್ಲಿ ಸಿಕ್ಕಿಕೊಂಡಂತಿರುತ್ತದೆ. ಈಗಲೂ ಹಾಗೆ ನಡೆಯುತ್ತದೆ. ಧಾರ್ಮಿಕ ನಿಯಮಗಳನ್ನು ಪಾಲಿಸಬೇಕೆಂಬುವ ಯಾವುದೇ ಬೋಧನೆಯಿಂದ ಎಳ್ಳಷ್ಟೂ ರಕ್ಷಣೆಯನ್ನು ಪಡೆಯಲು ಸಾಧ್ಯವಿಲ್ಲ. ಸ್ವ-ಪ್ರಯತ್ನ, ಒಳ್ಳೆಯ ಕೆಲಸ ಮತ್ತು ಮನುಷ್ಯನ ಅರ್ಹತೆಯು ರಕ್ಷಣೆಗೆ ನಡೆಸುತ್ತದೆಂಬ ಯಾವುದೇ ಬೋಧನೆಯು ಸಹ ಸುಳ್ಳು ಬೋಧನೆಯಾಗಿದೆ. **17**

**2:17** ಸತ್ಯವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದ ಕೆಲವರ ಹಿತಕ್ಕಾಗಿ, ಸುವಾರ್ತೆಗೆ ಇರಬಹುದಾದ ಆಕ್ಷೇಪಣೆಯ ವಿಷಯವಾಗಿ ಉತ್ತರಿಸಲು ಪೌಲನು ಪ್ರಾರಂಭಿಸುತ್ತಾನೆ. ಇಲ್ಲಿಯ ಭಾಷೆಯು ನಿಗೂಢವಾಗಿದೆ, ಆದರೆ ರೋಮಾ 6:1,15 ರಲ್ಲಿ ಅವನು ಮಾತಾಡುತ್ತಿದ್ದ ಅದೇ ಆಕ್ಷೇಪಣೆಯ ಬಗ್ಗೆ ಇಲ್ಲಿಯೂ ಮಾತಾಡುತ್ತಿರುವ ಸಾಧ್ಯತೆ ಇದೆ. ನೀತಿವಂತರಾಗಿ ಮಾಡಲ್ಪಟ್ಟವರೆಲ್ಲರೂ, ಅವನನ್ನೂ ಸೇರಿಸಿ, ಎಲ್ಲರೂ ಪಾಪಿಗಳೆ. ಹಾಗಾದರೆ ಕ್ರಿಸ್ತನನ್ನು ನಂಬುವುದರಿಂದ ಪಾಪ ಮಾಡಲು ಪ್ರೋತ್ಸಾಹವಿದೆಯೋ? ಉತ್ತರ, "ಖಂಡಿತವಾಗಿ ಇಲ್ಲ" ( ಈ ವಿಷಯದ ಬಗ್ಗೆ ರೋಮಾ 3:30 ರ ಟಿಪ್ಪಣಿಯನ್ನು ನೋಡಿರಿ). ರೋಮಾಪುರದವರಿಗೆ ಪತ್ರಿಕೆಯ 6ನೇ ಅಧ್ಯಾಯಗಳ ಟಿಪ್ಪಣಿಗಳನ್ನು ನೋಡಿರಿ. **18**

**2:18** ಇದರ ಅರ್ಥ ಹೀಗಿರಬಹುದು: "ಮೋಶೆಯ ಮೂಲಕ ದೇವರು ಕೊಟ್ಟ ಧರ್ಮಶಾಸ್ತ್ರವನ್ನು ನಿರಾಕರಿಸುವುದೇ ರಕ್ಷಣೆಯ ಮಾರ್ಗ, ನಾನು (ಅಥವಾ ಯಾರೇಯಾದರು) ಅದೇ ರಕ್ಷಣೆಯ ಮಾರ್ಗವೆಂದು ಅದನ್ನು ಅನುಸರಿಸಲು ಹಿಂದೆ ತಿರುಗಿದರೆ, ನಾನು ಪಾಪ ಪ್ರಜ್ಞೆಯುಳ್ಳವನಾಗುತ್ತೇನೆ ಮತ್ತು ಆ ಧರ್ಮಶಾಸ್ತ್ರವೇ ನನ್ನನ್ನು ಖಂಡಿಸುತ್ತದೆ." ಇಬ್ರಿ 2:1-4; 6:4-6; 10:26-29; 12:25 ಹೋಲಿಸಿರಿ. **19**

**2:19** *"ನಾನು ಸತ್ತೆನು"*– ರೋಮಾ 7:1-4 ನೋಡಿರಿ. ಧರ್ಮಶಾಸ್ತ್ರವನ್ನು ನಿರಾಕರಿಸುವ ರಕ್ಷಣೆಯು ಪಾಪವನ್ನು ಉತ್ತೇಜಿಸುವುದಿಲ್ಲ. ಅದು ಕ್ರಿಸ್ತನಲ್ಲಿರುವ ವಿಶ್ವಾಸಿಗಳನ್ನು "ದೇವರಿಗಾಗಿ ಜೀವಿಸಲು" –ಶಕ್ತಗೊಳಿಸುತ್ತದೆ. ಮತ್ತು ಧರ್ಮಶಾಸ್ತ್ರವು, ಜೀವವನ್ನು ಕೊಡುವ ಬದಲು, ಮರಣದ ಉಪಕರಣವಾಗುತ್ತದೆ (ರೋಮಾ 7:9-11; 2 ಕೊರಿಂಥ 3:6). **20**

**2:20** *"ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ"*– ಇದು ಎಲ್ಲಾ ವಿಶ್ವಾಸಿಗಳಿಗೂ ನಿಜವಾಗಿದೆ. ಪೌಲನಿಗೆ ಮಾತ್ರವಲ್ಲ. ರೋಮಾ 6:3-8 ನೋಡಿರಿ. ಕ್ರಿಸ್ತನು ಅವರ ಜಾಗದಲ್ಲಿ ಸತ್ತನು ಮತ್ತು ದೇವರು ಆತನ ಮರಣವನ್ನು ಅವರ ಮರಣವನ್ನಾಗಿ ಎಣಿಸುತ್ತಾನೆ. ಹೊಸ ಜೀವತಕ್ಕೆ ಇದು ಮಾರ್ಗವಾಗಿದೆ. ಈ ಆತ್ಮೀಕ ಜೀವನದ ಉಗಮವು ವಿಶ್ವಾಸಿಗಳಲ್ಲ, ಆದರೆ ಕ್ರಿಸ್ತನಾಗಿದ್ದಾನೆ. ಮತ್ತು ಈ ಹೊಸ ಜೀವಿತವನ್ನು ಜೀವಿಸಲು ಬೇಕಾದ ಶಕ್ತಿಯು ವಿಶ್ವಾಸಿಗಳ ದೈಹಿಕ ಅಥವಾ ಮಾನಸಿಕ ಜೀವಿತದಿಂದ ಬರುವುದಿಲ್ಲ ಆದರೆ ಅವರೊಳಗೆ ಜೀವಿಸುವ ಕ್ರಿಸ್ತನಿಂದ ಬರುತ್ತದೆ. ರೋಮಾ 8:1-10. ಈ ಹೊಸ ಜೀವಿತವನ್ನು ಜೀವಿಸಲು ದೇವರ ಮಗನಾದ ಕ್ರಿಸ್ತನ ಮೇಲಣ ನಂಬಿಕೆಯಿಂದ ಮಾತ್ರ ಸಾಧ್ಯ. ನಿಜವಾದ ಕ್ರೈಸ್ತ ಜೀವಿತವು ಆತನನ್ನು ನಂಬುವುದರ ಮೂಲಕ ಪ್ರಾರಂಭವಾಗುತ್ತದೆ ಮತ್ತು ಅದೇ ರೀತಿಯಲ್ಲಿ ಮುಂದುವರಿಯತ್ತದೆ (2 ಕೊರಿಂಥ 5:7; ಕೊಲೊ 2:6,7). ರೋಮಾ 6:11 ರಲ್ಲಿ ಪೌಲನು ಇತರರಿಗೆ ಕೊಟ್ಟ ಸೂಚನೆಯಂತೆ ಅದನ್ನೇ ತಾನು ಸಹ ಇಲ್ಲಿ ಮಾಡುತ್ತಿದ್ದಾನೆ.

*"ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು"*– 1:4; ರೋಮಾ 5:6-8. **21**

**2:21** ದೇವರ ಧರ್ಮಶಾಸ್ತ್ರವನ್ನು ಕೈಕೊಳ್ಳುವುದರ ಮೂಲಕ ಮನುಷ್ಯರಿಗೆ ರಕ್ಷಣೆಯಾಗುವುದೆಂದು ಬೋಧಿಸಿದರೆ ಕ್ರಿಸ್ತನ ಮರಣವು ಅರ್ಥವಿಲ್ಲದ್ದು ಮತ್ತು ವ್ಯರ್ಥವಾದದ್ದಾಗಿದೆ. ಆದ್ದರಿಂದ ಅದನ್ನು ತಿರಸ್ಕರಿಸುವುದರಲ್ಲಿ ಪೌಲನಿಗೆ ಯಾವ ಸಂಶಯವು ಇಲ್ಲ. ತಾವು ಮಾಡುವುದರ ಮೂಲಕ ದೇವರೊಂದಿಗೆ ತಮ್ಮನ್ನು ಸರಿಪಡಿಸಿಕೊಳ್ಳಲು ಸಾಧ್ಯವಾದರೆ ದೇವರೊಂದಿಗೆ ಜನರನ್ನು ಸರಿಪಡಿಸಲು ಕ್ರಿಸ್ತನು ಯಾಕೆ ಬಂದು ಜನರಿಗೋಸ್ಕರ ಸಾಯಬೇಕಿತ್ತು? ಆರಿಸಿಕೊಳ್ಳುವುದು ಸರಳವಾಗಿದೆ – ಕೃಪೆಯಿಂದಲೇ ರಕ್ಷಣೆ ಅಥವಾ ರಕ್ಷಣೆಯೇ ಇಲ್ಲ.

# 3[1]

**3:1** ಕಾರಣವಿಲ್ಲದೆ ಕ್ರಿಸ್ತನು ಸತ್ತನೆಂದು ನಂಬುವುದು ಹುಚ್ಚುತನವಾಗಿದೆ. ಆದರೆ ಸುಳ್ಳು ಬೋಧಕರು ಈ ಕ್ರೈಸ್ತರನ್ನು ಈ ರೀತಿಯ ಹುಚ್ಚುತನಕ್ಕೆ ನಡೆಸಲು ಪ್ರಯತ್ನಿಸುತ್ತಿದ್ದರು. ಕ್ರಿಸ್ತನು ಯಾವ ಕಾರಣಕ್ಕಾಗಿಯೂ ಸಾಯಲಿಲ್ಲವೆಂದು ಅವರು ಎಂದೂ ಹೇಳಿರುವುದಿಲ್ಲ. ಆದರೆ ಕ್ರಿಸ್ತನ ಮರಣದೊಂದಿಗೆ - ನಿಯಮಗಳನ್ನು ಪಾಲಿಸಬೇಕೆಂಬ ಅವಶ್ಯವಿದೆ ಎಂದು ಪರೋಕ್ಷವಾಗಿ ಬೋಧಿಸುವುದರ ಮೂಲಕ ಕ್ರಿಸ್ತನ ಮರಣವು ಅನಾವಶ್ಯಕ ಎಂದು ಬೋಧಿಸುತ್ತಿದ್ದರು. ಮತ್ತು ಈ ರೀತಿಯ ಬೋಧನೆಯು ಪೌಲನು ಅವರಿಗೆ ಸುವಾರ್ತೆಯನ್ನು ಪ್ರಸಂಗಿಸುವಾಗ "ಸ್ಪಷ್ಟವಾಗಿ ನಿರೂಪಿಸಿದ" ಸತ್ಯಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ. **2**

**3:2** ಅವನು ಬೋಧಿಸಿದ ಸತ್ಯಕ್ಕೆ ಸಾಕ್ಷಿಯಾಗಿ ಅವರ ಅನುಭವದಿಂದ ಹೇಳುವಂತೆ ಮನವಿಮಾಡುತ್ತಾನೆ. ಅವನು ಪ್ರಸಂಗಿಸಿದ ಸುವಾರ್ತೆಯನ್ನು ಅವರು ನಂಬಿದಾಗ, ಅವರು ದೇವರ ಆತ್ಮನನ್ನು ಸ್ವೀಕರಿಸಿದರು (4:6; ಎಫೆ 1:13; ಅಪೊ 10:44; ರೋಮಾ 8:15 ಹೋಲಿಸಿರಿ). ದೇವರು ಅವರಲ್ಲಿ ವಾಸಮಾಡಲು ತನ್ನ ಆತ್ಮನನ್ನು ಅವರಿಗೆ ಕೊಟ್ಟನು ಇದು ಅವರು ದೇವರ ನಿಯಮವನ್ನು ಪಾಲಿಸುವುದರ ಪ್ರಯತ್ನದಿಂದಲ್ಲ ಆದರೆ ಅವರು ಕ್ರಿಸ್ತನನ್ನು ನಂಬಿದ್ದರಿಂದ ಅವರಿಗೆ ಕೊಟ್ಟನು. ಧಾರ್ಮಿಕ ನೇಮನಿಷ್ಠೆಗಳನ್ನು ಮತ್ತು ನಿಯಮಗಳನ್ನು ಪಾಲಿಸುವುದರ ಮೂಲಕ ಯಾರೂ ಸಹ ದೇವರ ಆತ್ಮನನ್ನು ಇದುವರೆಗೂ ಪಡೆದಿಲ್ಲ. ದೇವರ ಆತ್ಮನು ಜನರಲ್ಲಿ ಸ್ವಾಭಾವಿಕವಾಗಿ ಇಲ್ಲದಿರುವುದನ್ನು ಗಮನಿಸಿ. ಕ್ರಿಸ್ತನನ್ನು ನಂಬಿಕೆಯಿಂದ ಸ್ವೀಕರಿಸುವುದರ ಮೂಲಕ ಮಾತ್ರ ಪರಿಶುದ್ಧಾತ್ಮನನ್ನು ಪಡೆದುಕೊಳ್ಳಬಹುದು. ಯೋಹಾನ 14:17 ನೋಡಿರಿ. **3**

**3:3** ಅವರು ಕ್ರಿಸ್ತನನ್ನು ನಂಬಿದಾಗ ಕೃಪೆಯಿಂದ ದೇವರು ಮಾಡಿದ್ದನ್ನು ಅವರು ಅನುಭವಿಸಿದರು. ಸ್ವ-ಪ್ರಯತ್ನ ಅಥವಾ ನಿಯಮಗಳು ಮತ್ತು ಧರ್ಮಶಾಸ್ತ್ರದ ಸಮಾರಂಭಗಳು ಅವರನ್ನು ಮುಂದೆ ನಡೆಸುತ್ತದೆಂದು ಯೋಚಿಸುವುದು ಹುಚ್ಚುತನವಲ್ಲವೋ? **4**

**3:4** ಅವುಗಳ ವಿಷಯವಾಗಿ ಅವನಿಗೆ ಅನುಮಾನವಿದೆ. ಸುಳ್ಳು ಬೋಧಕರು ಅವರ ಪ್ರಯತ್ನದಲ್ಲಿ ಸಫರಾಗುತ್ತಾರಾ? ಅಲ್ಲಿರುವ ಕ್ರೈಸ್ತರು ವಿಕೃತ ಸುವಾರ್ತೆಯನ್ನು ಸ್ವೀಕರಿಸುವರೋ? ಅವರ ನೋವುಗಳು ತಂದ ಪ್ರತಿಫಲಗಳನ್ನು ಅವರು ಕಳಕೊಳ್ಳುತ್ತಾರೋ? ಅವರ ನಡವಳಿಕೆಯು ಅವನಿಗೆ ಆಶ್ಚರ್ಯವನ್ನು ಮತ್ತು ಅನುಮಾನವನ್ನು ತರುತ್ತದೆ (4:11,20). **5**

**3:5** ಅವನು ವ.2 ರಲ್ಲಿನ ಪ್ರಶ್ನೆಯನ್ನು ಬೇರೆ ರೀತಿಯಲ್ಲಿ ಕೇಳುತ್ತಾನೆ. ಅವರು ಕೇಳಿಸಿಕೊಂಡ ಸುಳ್ಳು ಬೋಧನೆಯನ್ನು ವಿರೋಧಿಸಲು ಅವರು ಯೋಚಿಸಬೇಕೆಂದೂ ಮತ್ತು

ಸತ್ಯದ ಜ್ಞಾನವನ್ನು ಉಪಯೋಗಿಸಬೇಕೆಂದು ಅವನು ಬಯಸುತ್ತಾನೆ. **6**

**3:6** *"ಅಬ್ರಹಾಮನು"*– ದೇವರು ಮನುಷ್ಯರನ್ನು ನಂಬಿಕೆಯಿಂದ ನೀತಿವಂತರನ್ನಾಗಿ ಮಾಡುತ್ತಾನೆಯೇ ಹೊರತು ನ್ಯಾಯಪ್ರಮಾಣದ ಕೆಲಸದಿಂದಲ್ಲ ಎಂಬುದನ್ನು ವಾಕ್ಯದ ಆಧಾರದಿಂದ ತಿಳಿಸುವುದೇ ಪೌಲನ ಉದ್ದೇಶವಾಗಿತ್ತು.

*"ನೀತಿ"*– ಆದಿ 15:6; ರೋಮಾ 4:3. **7**

**3:7** ರೋಮಾ 4:11,12,16,17. ಇಲ್ಲಿ "ಮಕ್ಕಳು" ಎಂದರೆ ಆತ್ಮೀಕ ವಂಶಸ್ಥರು ಎಂದರ್ಥ, **8**

**- 3:8** ಆದಿ 12:3; 18:18; 22:18.

*"ಶಾಸ್ತ್ರ"*– ರೋಮಾ 3:10; 4:3.

*"ನಿನ್ನಲ್ಲಿ . . . ಆಶೀರ್ವಾದವುಂಟಾಗುವುದು"*– ಆದಿ 12:3; 18:18; 22:18. **9**

**3:9** ದೇವರು ಕೊಟ್ಟಿರುವ ನಿಯಮಗಳನ್ನು ಅನುಸರಿಸುವುದರ ಮೂಲಕ, ಧಾರ್ಮಿಕ ನೇಮನಿಷ್ಠೆಗಳನ್ನು ಅನುಸರಿಸುವುದರ ಮೂಲಕ ದೇವರ ಆಶೀರ್ವಾದವನ್ನು ಪಡೆಯಬಹುದೆಂದು ಎಲ್ಲಾ ಜನರು ಯೋಚಿಸುತ್ತಾರೆ. ಮೋಶೆಯ ಮೂಲಕ ದೇವರು ಕೊಟ್ಟ ಧರ್ಮಶಾಸ್ತ್ರವನ್ನು ಕೈಗೊಳ್ಳುವುದರ ಮೂಲಕ ದೇವರ ಆಶೀರ್ವಾದವನ್ನು ಖಂಡಿತವಾಗಿಯೂ ಪಡಕೊಳ್ಳಬಹುದೆಂದು ಯೆಹೂದ್ಯರು ದೃಢವಾಗಿದ್ದರು. ದೇವರ ಆಶೀರ್ವಾದವು ನಂಬಿಕೆಯಿಂದ ಬರುತ್ತದೆ, ಸ್ವಂತ ಪ್ರಯತ್ನದಿಂದಲ್ಲ ಎಂದು ಪೌಲನು ತೋರಿಸುತ್ತಾನೆ. "ಆಶೀರ್ವಾದ" ಎಂಬ ಟಿಪ್ಪಣಿಯನ್ನು ಆದಿ 12:1-3; ಸಂಖ್ಯಾ 6:23-27; ಧರ್ಮೋ 28:3-14; ಕೀರ್ತನೆ 1:1; 119:1; ಮತ್ತಾಯ 5:3-12; ಅಪೊ 3:26; ಎಫೆ 1:3 ನೋಡಿರಿ. **10**

**3:10** ಧರ್ಮೋ 27:26 ನೋಡಿರಿ. ದೇವರ ಧರ್ಮಶಾಸ್ತ್ರವನ್ನು ಪಾಲಿಸುವುದರ ಪ್ರಯತ್ನದಲ್ಲಿ ಜನರು ನಿರೀಕ್ಷಿಸಿದ ಆಶೀರ್ವಾದವನ್ನು ಹೊಂದಲಿಲ್ಲ. ಅದರ ಬದಲು ದೇವರ ಖಂಡನೆಯು ಅವರ ಮೇಲೆ ಬಂತು. ಇದು ಹೇಗೆ ಸಾಧ್ಯ? ಯಾಕಂದರೆ ಧರ್ಮಶಾಸ್ತ್ರವು ಸಂಪೂರ್ಣ, ಪರಿಪೂರ್ಣ, ನಿರಂತರ ವಿಧೇಯತೆಯನ್ನು ಕೋರುತ್ತದೆ, ಮತ್ತು ಈ ರೀತಿಯ ವಿಧೇಯತೆಯು ಯಾವ ವ್ಯಕ್ತಿಯಿಂದಲೂ ಸಾಧ್ಯವಿಲ್ಲ. ವಿಮೋ 19:5,6,8,21-25 ಟಿಪ್ಪಣಿಯನ್ನು ನೋಡಿರಿ. ಫಿಲಿಪ್ಪಿ 3:6 ರಲ್ಲಿ ಪೌಲನು ಹೀಗೆ ಹೇಳುತ್ತಾನೆ "ಕಾನೂನು ಬದ್ಧವಾದ ನೀತಿಯು" ಫಲವಿಲ್ಲದ್ದಾಗಿದೆ. ಆದರೆ ಅವನು ಸಹ ನಿಯಮವನ್ನು ಪಾಲಿಸದವರ ಮೇಲೆ ಧರ್ಮಶಾಸ್ತ್ರವು ಹೇಳುವ ಶಿಕ್ಷೆಗೆ ಒಳಗಾದನು ಯಾಕಂದರೆ ಹತ್ತನೆಯ ಆಜ್ಞೆಯನ್ನು ಅವನಿಂದ ಕೈಕೊಳ್ಳಲಾಗಲಿಲ್ಲ (ರೋಮಾ 7:7-14). ದೇವರ ಒಂದು ನಿಯಮವನ್ನು ಯಾವನಾದರು ಮುರಿದರೆ ಅವನು ಎಲ್ಲಾ ನಿಯಮಗಳನ್ನು ಮುರಿದು ಪಾಪಕ್ಕೊಳಗಾಗುವನು (ಯಾಕೋಬ 2:10,11). ಆದ್ದರಿಂದ ದೇವರ ನಿಯಮಗಳನ್ನು ಪಾಲಿಸಿ ದೇವರೊಂದಿಗೆ

ಸರಿಯಾಗಲು ಪ್ರಯತ್ನಿಸಿದ ವ್ಯಕ್ತಿಗಳೆಲ್ಲರ ಮೇಲೆ ಖಂಡನೆಯು ಬಂದಿತು. **11**

**3:11** ಹೊಸ ಒಡಂಬಡಿಕೆಯಲ್ಲಿ ಇಬ್ರಿ 2:4 ನ್ನು ಉಲ್ಲೇಖಿಸಲಾದ ಮೂರು ಸ್ಥಳಗಳಲ್ಲಿ ಇದು ಒಂದಾಗಿದೆ (ರೋಮಾ 1:17; ಇಬ್ರಿ 10:38). ದೇವರೊಂದಿಗೆ ಸರಿಯಾಗಿರಲು ಒಬ್ಬ ವ್ಯಕ್ತಿಯು ನಿಯಮಗಳನ್ನು ಪಾಲಿಸುವ ಪ್ರಯತ್ನದಿಂದ ಸಾಧ್ಯವಿಲ್ಲ, ಅದು ದೇವರ ಮೇಲಿನ ನಂಬಿಕೆಯಿಂದ ಮಾತ್ರ ಸಾಧ್ಯ. **12**

**3:12** ಯಾಜಕ 18:5. ನಿಯಮ ಮತ್ತು ನಂಬಿಕೆ ಇವೆರಡು ಸಂಪೂರ್ಣವಾಗಿ ಬೇರೆ ತತ್ವಗಳನ್ನು ಹೊಂದಿದೆ. ನಂಬಿಕೆಯು ದೇವರನ್ನು ನಂಬುತ್ತದೆ ಮತ್ತು ರಕ್ಷಣೆಯನ್ನು ಸ್ವೀಕರಿಸುತ್ತದೆ ಮತ್ತು ನಿತ್ಯಜೀವವನ್ನು ಬಹುಮಾನವಾಗಿ ಸ್ವೀಕರಿಸುತ್ತದೆ. ಧರ್ಮಶಾಸ್ತ್ರವು ಜೀವವನ್ನು ವಾಗ್ದಾನ ಮಾಡುತ್ತದೆ ಆದರೆ "ಅವುಗಳನ್ನು ಅನುಸರಿಸಿದವರಿಗೆ" ಮಾತ್ರ (ನಿಯಮದ ಅಪ್ಪಣೆ), ಅದನ್ನು ಕೇವಲ ಅನುಸರಿಸಲು ಪ್ರಯತ್ನಿಸುವ ಅಥವಾ ಅದನ್ನು ಮಾಡುತ್ತೇನೆಂದು ಹೇಳುವ ವ್ಯಕ್ತಿಗಳಿಗಲ್ಲ. ಮತ್ತು ಯಾರೂ ಸಹ ಅದನ್ನು ಪರಿಪೂರ್ಣವಾಗಿ, ನಿರಂತರವಾಗಿ ಮಾಡಲು ಸಾಧ್ಯವಿಲ್ಲದಿರುವದರಿಂದ, ಧರ್ಮಶಾಸ್ತ್ರವು ಮರಣವನ್ನು ಮತ್ತು ಖಂಡನೆಯನ್ನು ತರುತ್ತದೆ (ವ. 10; ರೋಮಾ 3:19,20). **13**

**3:13** ಪಾಪಿಗಳಾದ ಮನುಷ್ಯರಿಗಾಗಿ ಕರ್ತನಾದ ಯೇಸುವು ಮಾಡಲು ಇಚ್ಚಿಸಿದ್ದನ್ನು ನೋಡಿರಿ! ಆತನು ಮುರಿದ ನಿಯಮಗಳ ಶಾಪವನ್ನು ತನ್ನ ಮೇಲೆ ಹೊತ್ತುಕೊಂಡು ನಮ್ಮ ಸ್ಥಳವನ್ನು ಆತನು ತೆಗೆದುಕೊಂಡನು. ಅದರ ವಿರುದ್ಧವಾಗಿ ಮಾಡಿದ ಪಾಪಕ್ಕೆ ದಂಡವನ್ನು ಆತನು ಸಲ್ಲಿಸಿದನು. ರೋಮಾ 5:6-8; 2 ಕೊರಿಂಥ 5:21; 1 ಪೇತ್ರ 3:18 ಹೋಲಿಸಿರಿ. ವಿಮೋಚನೆಯ ವಿಷಯದ ಟಿಪ್ಪಣಿಯನ್ನು ಕೀರ್ತನೆ 78:35; ಮತ್ತಾಯ 20:28 ನೋಡಿರಿ.

"*ಮರ*"– ಧರ್ಮೋ 21:22,23. ಪ್ರಾಚೀನ ಸಮಯದಲ್ಲಿ ಅಧಿಕಾರಿಗಳು ಖಂಡನೆಗೆ ಒಳಗಾದ ಮತ್ತು ಅಪರಾಧಿಗಳನ್ನು ಮರಕ್ಕೆ ತೂಗು ಹಾಕಿ ಮರಣದಂಡನೆ ವಿಧಿಸುತ್ತಿದ್ದರು. ಇದು ಅವರ ಖಂಡನೆ ಮತ್ತು ಅಪಮಾನದ ಬಹಿರಂಗ ಪ್ರದರ್ಶನವಾಗಿತ್ತು. ಹಾಗೆಯೇ ಯೇಸುವು ನಾವು ಮಾಡಿದ ಅಪರಾಧಗಳಿಗಾಗಿ ಸತ್ತನು, ಮತ್ತು ನಮ್ಮ ಖಂಡನೆ ಮತ್ತು ಅಪಮಾನಗಳಿಗಾಗಿ ಶಿಲುಬೆಯ ಮೇಲೆ ತೂಗಿದನು (ಇದನ್ನು ಅಪೊ 5:30; 10:39; 13:29; 1 ಪೇತ್ರ 2:24 "ಮರ" ಎಂದು ಕರೆಯಲ್ಪಟ್ಟಿದೆ). ಅಲ್ಲಿರಲು ನಾವು ಅರ್ಹವುಳ್ಳವರಾಗಿದ್ದೇವೆ. **14**

**3:14** ಆತನ ಕಷ್ಟಗಳಲ್ಲಿ ನಮ್ಮ ಆಶೀರ್ವಾದವನ್ನು ಕಂಡನು. ಖಂಡನೆ ಮತ್ತು ಶಿಲುಬೆಯ ಮರಣವನ್ನು ತಪ್ಪಿಸುವ ಆಸೆಗಿಂತಲೂ ನಾವು ಚೆನ್ನಾಗಿರಬೇಕೆಂಬ ಆತನ ಆಸೆಯು ದೊಡ್ಡದಾಗಿತ್ತು. ಈಗ ಎಲ್ಲಾ ವಿಶ್ವಾಸಿಗಳು ಧರ್ಮಶಾಸ್ತ್ರದ ಶಾಪದಿಂದ ವಿಮೋಚಿಸಲ್ಪಟ್ಟಿದ್ದಾರೆ (ರೋಮಾ 8:1). ಮತ್ತು ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ ಆಶೀರ್ವಾದಗಳಿಗೆ ಉತ್ತರಾಧಿಕಾರಿಗಳಾಗಿದ್ದಾರೆ (ವಚನಗಳು 8,9 ನೋಡಿರಿ).

*“ವಾಗ್ದಾನ ಮಾಡಿದ ಆತ್ಮನು”*– ಲೂಕ 24:49; ಯೋಹಾನ 14:16,17; ಅಪೊ 1:4,5; 2:39. ಇಲ್ಲಿಯ ಬೋಧನೆಯನ್ನು ಎಚ್ಚರಿಕೆಯಿಂದ ಗಮನಿಸಿರಿ. ದೇವರ ಆತ್ಮನನ್ನು ಹೊಂದಿಕೊಂಡವರಿಗೆ ಮಾತ್ರ ದೇವರ ಆಶೀರ್ವಾದವು ದೊರಕುತ್ತದೆ. ನಾವು ದೇವರ ಆತ್ಮನನ್ನು “ನಂಬಿಕೆಯ ಮೂಲಕ” ಹೊಂದಿಕೊಳ್ಳುತ್ತೇವೆ (ವಚನಗಳು 2,5; ಲೂಕ 11:13; ಎಫೆ 1:13). ಮತ್ತು ಇದೆಲ್ಲವೂ “ಕ್ರಿಸ್ತ ಯೇಸುವಿನ” ಮೂಲಕ, ಬೇರೆ ಯಾರಿಂದಲೂ ಅಲ್ಲ ಅಥವಾ ಯಾವುದರಿಂದಲೂ ಅಲ್ಲ. ಮತ್ತು ಕ್ರಿಸ್ತನನ್ನು ನಂಬುವುದಕ್ಕಿಂತ ಮುಂಚಿತವಾಗಿ ನಮ್ಮಲ್ಲಿ ದೇವರ ಆತ್ಮನು ಇರುವುದಿಲ್ಲವೆಂಬುದು ಈ ವಚನದ ಮೂಲಕ ಸ್ಪಷ್ಟವಾಗುತ್ತದೆ. **15-17**

**3:15-17** ಮಾನವ ಒಪ್ಪಂದಗಳು ಮತ್ತು ಕರಾರುಗಳು ಸಹಜವಾಗಿ ಸತ್ಯವಾಗಿದೆ – ಅವುಗಳನ್ನು ಮಾಡಿಕೊಂಡ ಮೇಲೆ ನಡೆಯುವ ಘಟನೆಗಳು ಅವರನ್ನು ಬಾಧಿಸುವುದಿಲ್ಲ. ಅಬ್ರಹಾಮನೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯು ನಿಶ್ಚಯವಾಗಿಯೂ ಸತ್ಯವಾಗಿತ್ತು ಎನ್ನುವುದೇ ಪೌಲನ ಅಂಶವಾಗಿತ್ತು. ಮೋಶೆಯ ಧರ್ಮಶಾಸ್ತ್ರವು ದಶಕಗಳನಂತರ, ಅದರ ಮೇಲೆ ಪರಿಣಾಮ ಬೀರುವುದಿಲ್ಲ. **16**

**3:16** ಆದಿ 12:7; 13:15; 24:7 ನೋಡಿರಿ. ದೇವರು ಅಬ್ರಹಾಮನಿಗೆ ಕೊಟ್ಟ ವಾಗ್ದಾನಗಳಿಗೆ ಕ್ರಿಸ್ತನು ಉತ್ತರಾಧಿಕಾರಿಯಾಗಿದ್ದಾನೆ ಎಂಬುದು ಪೌಲನ ಅರ್ಥವಾಗಿದೆ. ಆತನು ಅಬ್ರಹಾಮನ “ಸಂತತಿ” (ಮತ್ತಾಯ 1:1). ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಅಬ್ರಹಾಮನ ಉತ್ತರಾಧಿಕಾರಿಗಳಾಗಿದ್ದಾರೆ ಯಾಕಂದರೆ ಅವರು ಕ್ರಿಸ್ತನಿಗೆ ಜೋಡಿಸಲ್ಪಟ್ಟವರಾಗಿದ್ದಾರೆ ಮತ್ತು ಕ್ರಿಸ್ತನೊಂದಿಗೆ ಬಾಧ್ಯರೂ ಆಗಿದ್ದಾರೆ (ವಚನಗಳು 14,29; ರೋಮಾ 4:13; 8:17). **18**

**3:18**ನಿಯಮ ಮತ್ತು ನಂಬಿಕೆ ಯಾವ ರೀತಿಯಲ್ಲಿ ಬೇರೆ ತತ್ವಗಳನ್ನು ಹೊಂದಿರುವ ಹಾಗೆ (ವ.12), ಹಾಗೆಯೇ ಧರ್ಮಶಾಸ್ತ್ರ ಮತ್ತು ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನಗಳು ಬೇರೆಯಾಗಿವೆ. ಅಬ್ರಹಾಮನ ಮೂಲಕ ದೇವರು ಜನರನ್ನು ಆಶೀರ್ವಧಿಸುತ್ತೇನೆಂಬ ವಾಗ್ದಾನಕ್ಕೂ ಧರ್ಮಶಾಸ್ತ್ರಕ್ಕೂ ಯಾವುದೇ ರೀತಿಯಲ್ಲಿಯೂ ಸಂಬಂಧವಿಲ್ಲ. ದೇವರು ವಾಗ್ದಾನ ಮಾಡಿದಾಗ ಜನರು ಸುಮ್ಮನೆ ಅದನ್ನು ನಂಬಬೇಕು ಮತ್ತು ಸಂತೋಷಿಸಬೇಕು, ನಿಯಮಗಳನ್ನು ಪಾಲಿಸುವುದರಿಂದ ಮತ್ತು ನೇಮನಿಷ್ಠೆಗಳನ್ನು ಪಾಲಿಸುವುದರಿಂದ ದೇವರೇ ನೆರವೇರಿಸಲೆಂದು ಪ್ರಯತ್ನಿಸಬಾರದು.

*“ಬಾಧ್ಯತೆ”*– ರೋಮಾ 4:13,14; 1 ಕೊರಿಂಥ 3:22; ಮತ್ತಾಯ 5:5; ಇಬ್ರಿ 11:8-10; 1 ಪೇತ್ರ 1:4. ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಭೂಮಿಯನ್ನು ಮತ್ತು ಪರಲೋಕವನ್ನು ಸಹ ಬಾಧ್ಯತೆಯನ್ನಾಗಿ ಮಾಡಿಕೊಳ್ಳುವರು. ಕ್ರಿಸ್ತನಿಗಿರುವ ಎಲ್ಲವನ್ನು ಅವರು ಹಂಚಿಕೊಳ್ಳುತ್ತಾರೆ ಮತ್ತು ಕ್ರಿಸ್ತನು ಎಲ್ಲವನ್ನೂ ಹೊಂದಿದ್ದಾನೆ (ಇಬ್ರಿ 1:2). “ಕೊಡು”

(1:6) – “ನಿಯಮ” ಇದಕ್ಕೆ ವಿರುದ್ಧವಾಗಿ ಪೌಲನು “ನಂಬಿಕೆ” ಮತ್ತು “ವಾಗ್ದಾನ” ಗಳ ಬಗ್ಗೆ ಮಾತಾಡಿದಂತೆಯೇ ಕೃಪೆಯ ಬಗ್ಗೆಯೂ ಮಾತಾಡುತ್ತಾನೆ. ದೇವರ ಬಹುಮಾನವನ್ನು ಸ್ವ-ಪ್ರಯತ್ನದಿಂದ ಗಳಿಸಲು ಸಾಧ್ಯವಿಲ್ಲ (ರೋಮಾ 4:4,5; ಎಫೆ 2:8,9). ಅದನ್ನು ಕೃತಜ್ಞತೆಯಿಂದ ಸುಮ್ಮನೆ ಸ್ವೀಕರಿಸಬೇಕು. **19**

**3:19** ಧರ್ಮಶಾಸ್ತ್ರವು ಅದರ ಅಡಿಯಲ್ಲಿದ್ದವರಿಗೆ ಶಾಪವನ್ನು ತಂದಿತು. ಹಾಗಾದರೆ ಜನರನ್ನು ಆಶೀರ್ವಧಿಸಬೇಕೆಂದಿರುವ ದೇವರು, ಯಾಕೆ ಧರ್ಮಶಾಸ್ತ್ರವನ್ನು ಕೊಟ್ಟನು? ರೋಮಾ 3:20; 4:15; 5:20; 7:7 ನೋಡಿರಿ. ಪಾಪವನ್ನು ಬಹಿರಂಗ ಪಡಿಸಲು, ಅದರ ಸ್ವಭಾವವನ್ನು ಮತ್ತು ಶಕ್ತಿಯನ್ನು ಪ್ರಕಟಿಸಲು ದೇವರು ಧರ್ಮಶಾಸ್ತ್ರವನ್ನು ಉಪಯೋಗಿಸಿದನು. ಈ ಮಾದರಿಯನ್ನು ಅನುಸರಿಸಿ ಕ್ರಿಸ್ತನ ನೀಡಿಕೆಯು ಜನರಿಗೆ ಇದೆ ಎಂಬುದನ್ನು ಬೋಧಿಸುತ್ತಿದ್ದನು. ಮತ್ತು ಕ್ರಿಸ್ತನ ನೀಡಿಕೆಯನ್ನು ತಿಳಿದುಕೊಳ್ಳುವುದು ಮತ್ತು ಆತನನ್ನು ಸ್ವೀಕರಿಸುವುದು ಎಲ್ಲಕ್ಕಿಂತಲೂ ಸಾಧ್ಯವಾದ ಆಶೀರ್ವಾದವಾಗಿದೆ.

*“ತನಕ”*– ಹಳೆಯ ಒಡಂಬಡಿಕೆಯ ನಿಯಮಗಳಿಗೆ ದೇವರು ಒಂದು ಕಾಲವನ್ನು ನಿರ್ಧರಿಸಿದ್ದನು. “ಸಂತತಿ” ಕ್ರಿಸ್ತನು ಬರುವವರೆಗೆ ಮಾತ್ರ ಆತನು ಬಂದ ಮೇಲೆ ಆತನು ಜನರಿಗೆ ರಕ್ಷಣೆಯನ್ನು ನೀಡುವನು.

*“ದೇವದೂತರು”*– ಇಬ್ರಿ 2:2; ಅಪೊ 7:38,53 ನೋಡಿರಿ. ಮೋಶೆಯ ಮಧ್ಯಸ್ಥಿಕೆಯ ಮೂಲಕ ಧರ್ಮಶಾಸ್ತ್ರವು ಬಂದಿತು. **20,21**

**3:20,21** ಪೌಲನು ಸಂಭನೀಯ ಆಕ್ಷೇಪಣೆಯನ್ನು ಎದುರಿಸಿದನು – ದೇವರು “ಒಬ್ಬನೆ” ಆಗಿರುವುದರಿಂದ (ದೇವರುಗಳೆಂದು ಕರೆಯಲ್ಪಡುವ ಅನೇಕ “ದೇವರುಗಳು”, ಆದರೆ ಅನೇಕ ದೇವರುಗಳಿಲ್ಲ) ಯಾಕೆ ತನ್ನ ವಾಗ್ದಾನವನ್ನು ಅಬ್ರಹಾಮನಿಗೆ ಕೊಟ್ಟನು ನಂತರ ಆತನ ವಾಗ್ದಾನಗಳನ್ನು ವಿರೋಧಿಸುವ ಧರ್ಮಶಾಸ್ತ್ರವನ್ನು ಕೊಟ್ಟನು? ಇದು ತಪ್ಪು ತಿಳುವಳಿಕೆ ಎಂದು ಪೌಲನು ಹೇಳುತ್ತಾನೆ. ದೇವರ ಆಶೀರ್ವಾದದ ವಾಗ್ದಾನಗಳಿಗೆ ಧರ್ಮಶಾಸ್ತ್ರವು ವಿರೋಧಿಸುವುದಿಲ್ಲ. ಆದರೆ ಜನರು ರಕ್ಷಣೆಗಾಗಿ ಧರ್ಮಶಾಸ್ತ್ರವನ್ನು ಆತುಕೊಳ್ಳುವುದರಿಂದ ದೇವರ ವಾಗ್ದಾನಗಳು ನೆರವೇರುವುದಿಲ್ಲ, ಯಾಕಂದರೆ ಧರ್ಮಶಾಸ್ತ್ರವು ಆತ್ಮೀಕ ಜೀವಿತವನ್ನು ಕೊಡಲು ಸಾಧ್ಯವಿಲ್ಲ ಅಥವಾ ಮನುಷ್ಯರನ್ನು ನೀತಿವಂತರಾಗಿ ಮಾಡಲು ಸಾಧ್ಯವಿಲ್ಲ (ರೋಮಾ 7:14; 8:3). **22,23**

**3:22,23** ರೋಮಾ 3:19-24 ಹೋಲಿಸಿರಿ. ಧರ್ಮಶಾಸ್ತ್ರವು ಖಂಡಿಸುತ್ತದೆ ಮತ್ತು ಮನುಷ್ಯರು ತಾವೇ ಆರಿಸಿಕೊಂಡ ಸೆರೆಯಲ್ಲಿ ಬಂಧಿಸುತ್ತದೆ – ಪಾಪವು ಸೆರೆಮನೆಯಾಗಿದೆ. ಕ್ರಿಸ್ತನು ರಕ್ಷಣೆಯನ್ನು ಕೊಡಲು ಮತ್ತು ನಂಬಿಕೆಯ ಮಾರ್ಗವನ್ನು ಬೋಧಿಸುವ ಮುಂಚೆ ಧರ್ಮಶಾಸ್ತ್ರವು ಸೆರೆಯ ಯಜಮಾನನಂತಿತ್ತು. ಕ್ರಿಸ್ತನ ಹೊರತು ಉತ್ತಮವುಳ್ಳ ಮನುಷ್ಯರು ಸಹ ಸೆರೆಯಲ್ಲಿದ್ದರು. ದೇವರ ದೃಷ್ಟಿಯಲ್ಲಿ ಆತನ ನಿಯಮವನ್ನು ಮುರಿದವರು

ಶಿಕ್ಷೆಯನ್ನು ಹೊಂದಲು ಹಿಡಿದ ಅಪರಾಧಿಗಳಾಗಿದ್ದಾರೆ. ಅವರಿಗೆ ಆತ್ಮೀಕ ಸ್ವಾತಂತ್ರ್ಯವಿಲ್ಲ ಮತ್ತು ಕರ್ತನಾದ ಯೇಸುವಿನ ಹೊರತು ಬಿಡುಗಡೆಯಾಗುವ ನಿರೀಕ್ಷೆ ಇಲ್ಲ. ಈ ಸೆರೆಯಿಂದ ಒಬ್ಬನು ಸ್ವ-ಪ್ರಯತ್ನದಿಂದ, ಒಳ್ಳೆಯ ಕೆಲಸಗಳಿಂದ, ನಿಯಮಗಳನ್ನು-ಪಾಲಿಸುವುದರಿಂದ, ಧಾರ್ಮಿಕ ನಿಯಮಗಳಿಂದ ಮತ್ತು ನೇಮನಿಷ್ಠೆಗಳಿಂದ ಅಥವಾ ಅವನು ಮಾಡಬಹುದಾದ ಯಾವುದೇ ಕಾರ್ಯದ ಮೂಲಕ ತಪ್ಪಿಸಿಕೊಳ್ಳಲಾರನು. ರಕ್ಷಣೆ, ಬಿಡುಗಡೆ, ಆತ್ಮೀಕ ಸ್ವಾತಂತ್ರ್ಯ ಮತ್ತು ದೇವರ ನಿತ್ಯ ಆಶೀರ್ವಾದಗಳು ಆತನು ನೇಮಿಸಿರುವವುಗಳಿಂದ ಮಾತ್ರ ಬರುತ್ತವೆ – ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆ (ವಚನಗಳು 9,14,26; 2:16; ರೋಮಾ 1:16,17; 3:22,28; ಯೋಹಾನ 3:16,36; 5:24; ಎಫೆ 2:8,9). **24**

**3:24** ಧರ್ಮಶಾಸ್ತ್ರದಿಂದ ಜನರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ, ಆದರೆ ರಕ್ಷಣೆಯ ಮಾರ್ಗವು ಕ್ರಿಸ್ತನಲ್ಲಿ ತೋರಿಬರುವವರೆಗೂ ಅವರನ್ನು ಶಿಸ್ತುಗೊಳಿಸಲು ಉಪಯೋಗಿಸಿದನು. ಹೇಗೆ ಧರ್ಮಶಾಸ್ತ್ರವು ಪೌಲನಿಗೆ "ಬೋಧಕ" ನಾಗಿತ್ತು ಎಂಬುದನ್ನು ರೋಮಾ 7:7-14 ರಲ್ಲಿ ನೋಡಿರಿ.

*"ನಂಬಿಕೆಯಿಂದ ನೀತಿವಂತರಾದರು"* – 2:16. **25**

**3:25** ಕ್ರಿಸ್ತನು ತನ್ನಲ್ಲಿ ನಂಬಿಕೆಯ ಮಾರ್ಗವನ್ನು ಪ್ರಕಟಿಸಿದ್ದರಿಂದ ಮತ್ತು ಜನರು ರಕ್ಷಣೆಗಾಗಿ ಆತನ ಮೇಲೆ ನಂಬಿಕೆ ಇಟ್ಟ ಮೇಲೆ, ಮೋಶೆಯ ಧರ್ಮಶಾಸ್ತ್ರಕ್ಕೆ ಅವರ ಮೇಲೆ ಇನ್ನು ಅಧಿಕಾರವಿಲ್ಲ (ರೋಮಾ 6:14). **26**

**3:26** ಮನುಷ್ಯರು ಸ್ವಾಭಾವಿಕವಾಗಿ ದೇವರ ಮಕ್ಕಳಲ್ಲ. ದೇವರು ಸಕಲ ಮನುಷ್ಯರ ಸೃಷ್ಟಿಕರ್ತನಾಗಿದ್ದರೂ ಆತನು ಯಾರ ಆತ್ಮೀಕ ತಂದೆಯೂ ಅಲ್ಲ (ಯೋಹಾನ 8:44 ಹೋಲಿಸಿ ನೋಡಿರಿ). ಕ್ರಿಸ್ತನ ಮೇಲೆ ನಂಬಿಕೆಯ ಮೂಲಕ ಮಾತ್ರ ದೇವರ ಮಕ್ಕಳಾಗಲು ಸಾಧ್ಯ – ಯೋಹಾನ 1:12,13. **27**

**3:27** *"ಕ್ರಿಸ್ತನಲ್ಲಿ ದೀಕ್ಷಾಸ್ನಾನ"* – ರೋಮಾ 6:3 ಟಿಪ್ಪಣಿಯನ್ನು ನೋಡಿರಿ. ನಂಬಿಕೆಯು ನಮ್ಮನ್ನು ದೇವರ ಮಕ್ಕಳನ್ನಾಗಿ ಮಾಡುತ್ತದೆ (ವ.26), ನೀರಿನ ದೀಕ್ಷಾಸ್ನಾನವಲ್ಲ, ಅದು ಕೇವಲ ಬಹಿರಂಗದ ಸೂಚನೆ ಒಳಗಿನ ಆತ್ಮೀಕ ಬದಲಾವಣೆ. ಕ್ರಿಸ್ತನಲ್ಲಿ ದೀಕ್ಷಾಸ್ನಾನವು ದೇವರ ಆತ್ಮನಿಂದ ಮಾತ್ರ – 1 ಕೊರಿಂಥ 12:13.

*"ಕ್ರಿಸ್ತನನ್ನು ಧರಿಸಿಕೊಳ್ಳಿರಿ"* – ಕ್ರಿಸ್ತನಿಂದ ತಮ್ಮನ್ನು ಧರಿಸಿಕೊಂಡವರು – ಇದರ ಅರ್ಥ ವಿಶ್ವಾಸಿಗಳು ಕ್ರಿಸ್ತನಲ್ಲಿ ದೇವರ ಮುಂದೆ ನಿಂತುಕೊಳ್ಳುವುದು, ಆತನ ನೀತಿಯಿಂದ ಮುಚ್ಚಲ್ಪಟ್ಟವರು, ಕ್ರಿಸ್ತನು ಹೇಗೆ ದೇವರಿಂದ ಅಂಗೀಕರಿಸಲ್ಪಡುತ್ತಾನೋ ಅದೇ ರೀತಿಯಲ್ಲಿ. **28**

**3:28** *"ನೀವೆಲ್ಲರೂ ಒಂದೇ"* – 1 ಕೊರಿಂಥ 12:13; ಯೋಹಾನ 17:20-23; ಕೊಲೊ 3:11. ದೇವರು ಕ್ರಿಸ್ತನಲ್ಲಿರುವ ಮನುಷ್ಯರನ್ನು ತಾರತಮ್ಯ ಮಾಡುವುದಿಲ್ಲ. ಆತನಲ್ಲಿ

ಅವರ ಹಿನ್ನೆಲೆ, ಮೂಲ, ಸಮಾಜಿಕ ಅಂತಸ್ತು, ಜಾತಿ, ಜನಾಂಗ, ಮುಂತಾದವುಗಳು ಸಂಪೂರ್ಣವಾಗಿ ಏನೂ ಅಲ್ಲದವುಗಳಾಗಿವೆ. ಜನರು ಯಾರನ್ನು ಕಡುಬಡವ ಅಥವಾ ಕೀಳಾಗಿರುವ ವಿಶ್ವಾಸಿಗಳು ಸಹ ಬೇರೆಯವರ ರೀತಿಯಲ್ಲೇ ಕ್ರಿಸ್ತನಲ್ಲಿ ಸ್ವೀಕರಿಸಲ್ಪಡುತ್ತಾರೆ.
**29**

**3:29** ವಚನಗಳು 7,14,18.

# 4 1-7

**4:1-7** ಆದಿನಗಳ ರೂಢಿಗಳನ್ನು ಪೌಲನು ಸೂಚಿಸುತ್ತಿದ್ದಾನೆ ಮತ್ತು ಆತ್ಮೀಕ ಸತ್ಯಗಳನ್ನು ವಿವರಿಸಲು ಅವುಗಳನ್ನು ದೃಷ್ಟಾಂತವಾಗಿ ಉಪಯೋಗಿಸುತ್ತಾನೆ. ಗಂಡು ಮಕ್ಕಳು ಉತ್ತರಾಧಿಕಾರಿಯಾಗುತ್ತಿದ್ದರು ಮತ್ತು ತಂದೆಗಳಿಗೆ ಸಾಧ್ಯವಾದರೆ ಮಕ್ಕಳು ಒಂದು ನಿರ್ದಿಷ್ಟ ವಯಸ್ಸಿಗೆ ಬರುವವರೆಗೂ ಮಕ್ಕಳನ್ನು ನೋಡಿಕೊಳ್ಳಲು ಪೋಷಕರನ್ನು ನೇಮಿಸುತ್ತಿದ್ದರು. ಆ ವಯಸ್ಸನ್ನು ಮುಟ್ಟಿದಾಗ ಅವರನ್ನು ಪಕ್ವವುಳ್ಳ "ಮಕ್ಕಳು" ಎಂದು ಪರಿಗಣಿಸಲ್ಪಡುತ್ತಿದ್ದರು ಇನ್ನು ಅವರು ಚಿಕ್ಕ ಮಕ್ಕಳಲ್ಲ. ಧರ್ಮಶಾಸ್ತ್ರದ ಅಡಿಯಲ್ಲಿರುವವರು ಸಹ ಚಿಕ್ಕ ಮಕ್ಕಳಂತಿದ್ದಾರೆಂದು ಪೌಲನು ಹೇಳುತ್ತಿದ್ದಾನೆ, ಪರಿಪಕ್ವವಿಲ್ಲದವರು, ದೇವರು ಅವರಿಗಾಗಿ ಬಯಸಿದ್ದೆಲ್ಲವನ್ನು ಅವರು ಪಡೆದುಕೊಳ್ಳಲು ಆಗಲಿಲ್ಲ. ಆದರೆ ಕ್ರಿಸ್ತನು ಬಂದಾಗ, ವಿಶ್ವಾಸಿಗಳಿಗೆ ಮಕ್ಕಳಾಗುವ ಹಕ್ಕನ್ನು ಕೊಡುವ ದೇವರ ಸಮಯವು ಬಂದಿತು. ಕ್ರಿಸ್ತನು ಬರುವ ಮುಂಚೆ ಅವರು "ಲೋಕದ ಮೂಲಭೂತ ವಿಷಯಗಳ" ಅಡಿಯಲ್ಲಿದ್ದರು (ವ.3), ಅಥವಾ ಧರ್ಮಶಾಸ್ತ್ರದ ಅಡಿಯಲ್ಲಿ (ವ.5). ಈಗ ಅವರು "ಪೋಷಕರು ಮತ್ತು ಪಾರುಪತ್ಯಗಾರ" ರಿಂದ ಬಿಡುಗಡೆ ಹೊಂದಿದ್ದಾರೆ. ಅವರಿಗೆ ದೇವರ ಮಕ್ಕಳಾಗುವ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಹೊಂದಿದ್ದಾರೆ. **4**

**4:4** "ಕಾಲ" ವು ಸುಮಾರು 2000 ವರ್ಷಗಳ ಹಿಂದೆ; ಯೇಸುವು ದೇವರ ಮಗನಾಗಿದ್ದನು. ಅವನು "ಸ್ತ್ರೀಯಲ್ಲಿ ಹುಟ್ಟಿದನು"–(ಮತ್ತಾಯ 1:18-21; ಲೂಕ 1:26-38). ಅವನಿಗೆ ನಿಜವಾದ ಮಾನವ ಸ್ವಭಾವವಿತ್ತು (ಯೋಹಾನ 1:14; ಇಬ್ರಿ 2:14) ಅವನು ಮೋಶೆಯ ಧರ್ಮಶಾಸ್ತ್ರದ ಅಧೀನದಲ್ಲಿ ಯೆಹೂದ್ಯನಾಗಿ ಹುಟ್ಟಿದನು (ಎಲ್ಲಾ ಯೆಹೂದ್ಯರಂತೆ). **5**

**4:5** *"ವಿಮೋಚನೆ"*– 3:13,14. ಮನುಷ್ಯರು ಧರ್ಮಶಾಸ್ತ್ರದ ಅಧೀನತೆಯಲ್ಲಿ ಇರುವವರೆಗೂ ಈಗಿರುವಂತೆ ಅವರಿಗೆ ದೇವರ ಮಕ್ಕಳಾಗುವ ಹಕ್ಕು ಹೊಂದಿರಲಿಲ್ಲ. **6**

**4:6** 3:2,14; ರೋಮಾ 8:15. "ಅಬ್ಬಾ" ಎಂಬುದು ಅರೇಮಿಯ ಭಾಷೆಯಲ್ಲಿ ತಂದೆ ಎಂಬುದಾಗಿ (ಇಬ್ರಿಯ ಭಾಷೆಗೆ ಬಹು ಹತ್ತಿರವಾದ ಭಾಷೆ). **7**

**4:7** ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಚಾಟಿಯ ಅಡಿಯಲ್ಲಿ ಕೆಲಸಮಾಡುವ ಗುಲಾಮರಲ್ಲ. ಅವರು ದೇವರ ಮಕ್ಕಳು ಅವರಿಗೆ ದೇವರಿಗಿರುವದೆಲ್ಲವನ್ನು ಉಚಿತವಾಗಿ ಕೊಡಲಾಗಿದೆ (1

ಕೊರಿಂಥ 3:21-23). **8,9**

**4:8,9** ಈ ಅನ್ಯ ವಿಶ್ವಾಸಿಗಳು ಮೊದಲು ಸುಳ್ಳು ಧರ್ಮದ ಮತ್ತು ಸುಳ್ಳು ದೇವರುಗಳ ಬಂಧನದಲ್ಲಿದ್ದರು, ಆದರೆ ಈಗ ಸತ್ಯ ದೇವರ ಜ್ಞಾನವನ್ನು ಪಡೆದುಕೊಳ್ಳುವುದರ ಮೂಲಕ ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ಅವರು ಮೋಶೆಯ ಧರ್ಮಶಾಸ್ತ್ರದ ಅಧೀನಕ್ಕೆ ತಮ್ಮನ್ನು ಒಪ್ಪಿಸಿಕೊಡುವವರಿದ್ದರು. ಇದು ಹಳೆಯ ಬಂಧನದಿಂದ ತಪ್ಪಿಸಿಕೊಂಡು ಹೊಸ ಬಂಧನಕ್ಕಾಗಿ ಸ್ವಾತಂತ್ರ್ಯವನ್ನು ವಿನಿಮಯ ಮಾಡಿಕೊಳ್ಳುವುದಾಗಿದೆ. **10**

**4:10** ಮೋಶೆಯ ಧರ್ಮಶಾಸ್ತ್ರದ ಬಗ್ಗೆ ಮಾತನಾಡುತ್ತಿದ್ದಾನೆ. "ದಿನಗಳು" ಎಂದು ಹೇಳುವಾಗ ಸಬ್ಬತ್ ದಿನಗಳು ಎಂದರ್ಥ; "ಮಾಸಗಳು" – ಅಮವಾಸ್ಯೆ ಹಬ್ಬದ ಉತ್ಸವ; "ಕಾಲಗಳು"– ಯೆಹೂದ್ಯರ ಹಬ್ಬಗಳು; "ಯೆಹೂದ್ಯರ ಹಬ್ಬಗಳು" – ಸಬ್ಬತ್ ಮತ್ತು ಉತ್ಸವ ಕಾಲಗಳು (ವಿಮೋ 20:8; 23:10,11,14-17; ಯಾಜಕ 23; 25:8-12). ಇವುಗಳನ್ನು ಧಾರ್ಮಿಕವಾಗಿ ಆಚರಿಸುವುದನ್ನು ಅವನು ಹೀಗೆ ಕರೆಯುತ್ತಾನೆ "ಬಲಹೀನ ಮತ್ತು ಶೋಚನೀಯ ತತ್ವಗಳು" (ವ.9). ಆ ದಿನಗಳು, ಮುಂತಾದವುಗಳು, ಅವು ಬರಿ ಚಿತ್ರಗಳಾಗಿದ್ದವು, ಆತ್ಮೀಕ ಸತ್ಯಗಳ ರೀತಿಯ ಅಥವಾ ನೆರಳು, ಮತ್ತು ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ಇವುಗಳಲ್ಲಿ ಯಾವುದನ್ನೂ ಆಚರಿಸಬೇಕಾದ ಖಡ್ಡಾಯವಿಲ್ಲ. ಇಬ್ರಿ 8:5; 10:1 ಹೋಲಿಸಿರಿ. ಪೌಲನಿಗೆ ಚೆನ್ನಾಗಿ ಗೊತ್ತಿತ್ತು (ಮತ್ತು ನಾವು ಸಹ ತಿಳಿದುಕೊಳ್ಳಬೇಕು) ಕೆಲವು ದಿನಗಳನ್ನು ಆಚರಿಸಿದರೆ ಅಥವಾ ಆಚರಿಸದಿರುವದರಿಂದ ಅವುಗಳು ನಮ್ಮನ್ನು ಉತ್ತಮರನ್ನಾಗಿಯೋ ಅಥವಾ ಕಳಪೆಯನ್ನಾಗಿಯೋ ಮಾಡಲು ಸಾಧ್ಯವಿಲ್ಲ. ಆದರೆ ಅವುಗಳನ್ನು ವಿಶ್ವಾಸಿಗಳು ಆಚರಿಸಬೇಕೆಂಬ ಬೋಧನೆಯು ಅವರನ್ನು ಬಂಧನಕ್ಕೆ ಒಳಪಡಿಸುತ್ತದೆ ಮತ್ತು ಅವರ ಆತ್ಮೀಕ ಜೀವಿತವನ್ನು ಗಾಯಗೊಳಿಸುತ್ತದೆ. **11**

**4:11** *"ನಿಮ್ಮ ವಿಷಯದಲ್ಲಿ ಭಯಪಡುತ್ತೇನೆ"*– ಅವರು ಯೆಹೂದ್ಯರ ಪರಿಶುದ್ಧ ದಿನಗಳು, ಮುಂತಾದುವುಗಳನ್ನು ಆಚರಿಸುವುದನ್ನು ಕಂಡು ಪೌಲನು ಆಶ್ಚರ್ಯಚಿಕಿತನಾಗುತ್ತಾನೆ. ಅದು ಅವನಿಗೆ ಅವರು ಸುಳ್ಳು ಸುವಾರ್ತೆಯ ಬೋಧಕರ ಕಡೆಗೆ ತಿರುಗಿಕೊಳ್ಳುವುದಾಗಿತ್ತು (1:6-7). ಅವರು ನಿಜವಾಗಿಯೂ ಸುವಾರ್ತೆಯನ್ನು ಅರ್ಥ ಮಾಡಿಕೊಂಡರೋ ಏನೋ ಎಂದು ಅವನು ಯೋಚಿಸಿರಬೇಕು. **12-20**

**4:12-20** ಪೌಲನು ಇಲ್ಲಿ ಬಹಳ ಮುಖ್ಯವಾದ ತತ್ವಗಳ ವಿಷಯಗಳನ್ನು ಮಾತನಾಡುತ್ತಿದ್ದಾನೆ. ಈಗ ಅವನು ತನ್ನ ಮತ್ತು ಗಲಾತ್ಯದವರ ನಡುವೆ ಇರುವ ಸಂಬಂಧದ ವಿಷಯವಾಗಿ ಮಾತನಾಡುತ್ತಾನೆ. ಇಲ್ಲಿ ಅವನ ಸಭಾಪಾಲಕನ ಹೃದಯವು ಪ್ರಕಟವಾಗುತ್ತದೆ. ಅವರು ಅವನ "ಚಿಕ್ಕ ಮಕ್ಕಳು". ಅವನು ಅವರನ್ನು ಪ್ರೀತಿಸುತ್ತಾನೆ ಮತ್ತು ಅವರ ವಿಷಯವಾಗಿ ಬಹಳ ಕಾಳಜಿಯುಳ್ಳವನಾಗಿದ್ದಾನೆ. **12**

**4:12** "ನನ್ನ ಹಾಗೆ ಆಗಿರಿ" – ಪೌಲನು ಧರ್ಮಶಾಸ್ತ್ರದ ಯಾವುದೇ ಎಲ್ಲಾ ಬಂಧನದಿಂದ

ಮುಕ್ತನಾಗಿದ್ದನು ಮತ್ತು ದೇವರ ಕೃಪೆಯಲ್ಲಿ ಮಾತ್ರ ಸಂತೋಷಿಸುತ್ತಿದ್ದನು. ಅವರು ಅವನನ್ನು ಇದರಲ್ಲಿ ಹಿಂಬಾಲಿಸಬೇಕೆಂದು ಬಯಸಿದನು.

*"ನಾನು ನಿಮ್ಮ ಹಾಗೆ ಆದೆನು"*– ಅವರು ಅನ್ಯ ಜನರಾಗಿದ್ದರು ಮತ್ತು ಅಲ್ಲಿಗೆ ಸುವಾರ್ತೆಯನ್ನು ಸಾರಲು ಹೋದಾಗ ಅವನು ಅನ್ಯಜನರಂತೆಯೇ ಆದನು, ಒಬ್ಬನು ಯೆಹೂದ್ಯನೇ ಆಗಿರಲಿಲ್ಲವೆಂಬಂತ್ತೆ. 1 ಕೊರಿಂಥ 9:20-23 ಹೋಲಿಸಿರಿ. ಅವರೊಂದಿಗೆ ಮಾತನಾಡುತ್ತಿಲ್ಲ ಎಂದು ಹೇಳುತ್ತಾನೆ ಯಾಕಂದರೆ ಅವರು ವಯಕ್ತಿಕವಾಗಿ ತಪ್ಪು ಮಾಡಿದ್ದರು. ಅದಕ್ಕೆ ತದ್ವಿರುದ್ಧವಾಗಿ, ಮುಂದಿನ ವಚನಗಳಲ್ಲಿ ಅವರ ಮೇಲೆ ಎಷ್ಟು ಪ್ರೀತಿಯನ್ನಿಟ್ಟಿದ್ದನೆಂಬುದನ್ನು ತೋರಿಸುತ್ತಾನೆ. **13**

**4:13** *"ದುರ್ಬಲತೆ"*– ಅಥವಾ "ಅಸೌಖ್ಯತೆ" ಅವನು ಯಾವುದನ್ನು ಸೂಚಿಸುತ್ತಿದ್ದಾನೆಂದು ನಮಗೆ ಗೊತ್ತಿಲ್ಲ. ಒಂದು ವೇಳೆ ಕಣ್ಣಿನ ಬೇನೆಯೋ (ವ.15)? ಅದು 2 ಕೊರಿಂಥ 12:7 ರಲ್ಲಿ ಹೇಳಿದಂತೆ ಒಂದು "ಮುಳ್ಳು" –ಆಗಿತ್ತಾ? ಒಂದು ವೇಳೆ ಅವನು ಅನುಭವಿಸಿದ ಕಷ್ಟಗಳ ಫಲಿತಾಂಶವೋ (ಅಪೊ 14:19)? ನಮಗೆ ಖಂಡಿತವಾಗಿ ಗೊತ್ತಿಲ್ಲ. **14**

**4:14** *"ನನ್ನ ವಿಚಾರಣೆ"*– ಅವರು ಅವನ ದೌರ್ಬಲ್ಯವನ್ನು ದೇವರಿಂದ ಬಂದ ಶಿಕ್ಷೆ ಎಂದು ಯೋಚಿಸಿಸುವ ಶೋಧನೆಗೆ ಒಳಗಾದರು, ಆದ್ದರಿಂದ ದೇವರ ಸಂದೇಶಕನೆಂದು ಅವನನ್ನು ನಂಬಲು ನಿರಾಕರಿಸುವವರಿದ್ದರು. ಆದರೆ ಆ ರೀತಿಯ ಶೋಧನೆಗೆ ಅವರು ತಮ್ಮನ್ನು ಒಪ್ಪಿಸಿಕೊಡಲಿಲ್ಲ, ಆದರೆ ಅವನನ್ನು ಬಹಳ ಗೌರವದಿಂದ ಆಹ್ವಾನಿಸಿದರು. **15**

**4:15** ಸುಳ್ಳು ಬೋಧಕರ ಬೋಧನೆಯು ಅವರನ್ನು ಮೋಶೆಯ ಧರ್ಮಶಾಸ್ತ್ರವು ಅವರನ್ನು ಬಂಧನಕ್ಕೆ ನಡೆಸುವುದರಿಂದ ಅವರ ಸಂತೋಷವನ್ನು ಮತ್ತು ಪೌಲನ ಮೇಲೆ ಅವರ ಪ್ರೀತಿಯನ್ನು ಕೊಲ್ಲುತ್ತಿತ್ತು. ರಕ್ಷಣೆ ಹೊಂದಲು ಸ್ವ-ಪ್ರಯತ್ನದ ತತ್ವವು ಯಾವಾಗಲೂ ಸಂತೋಷವನ್ನು ಕೊಲ್ಲುತ್ತದೆ. **16**

**4:16** ಜನರಿಗೆ ದೇವರ ಬಗ್ಗೆ ಸತ್ಯವನ್ನು ತಿಳಿಸುವುದು ಅವರಿಗೆ ಮಾಡುವ ದೊಡ್ಡ ಕಾರ್ಯವಾಗಿದೆ, ಆದರೆ ಅನೇಕ ವೇಳೆ ಜನರು ನಾವು ಹಾಗೆ ಮಾಡುವುದರಿಂದ ನಮ್ಮನ್ನು ದ್ವೇಷಿಸುತ್ತಾರೆ. **17,18**

**4:17,18** *"ಅವರು"*– ವ್ಯತಿರಿಕ್ತವಾದ ಸುವಾರ್ತೆಯನ್ನು ಬೋಧಿಸುವ ಸುಳ್ಳು ಬೋಧಕರನ್ನು ಅವನು ಸೂಚಿಸುತ್ತಿದ್ದಾನೆ (1:6,7). ಆ ರೀತಿಯ ಜನರು ಯಾವಾಗಲೂ ಪಂಗಡಗಳ ಮತ್ತು ಬಣಗಳ ನಾಯಕರಾಗಿ ಜನರು ಆಸಕ್ತಿಯಿಂದ ಅವರ ಕಡೆಯಲ್ಲಿರುವಂತೆ ಬಯಸುತ್ತಾರೆ (ರೋಮಾ 16:17,18 ಹೋಲಿಸಿರಿ. ಪೌಲನು (ಮತ್ತು ನಮಗೆಲ್ಲರಿಗೂ ಅವನು ಉದಾಹರಣೆಯಾಗಿದ್ದಾನೆ) ಜನರು ದೇವರ ವಿಷಯವಾಗಿ ಆಸಕ್ತಯಿಂದಿರಬೇಕೆಂದು ಬಯಸುತ್ತಾನೆ. 1 ಕೊರಿಂಥ 3:4-9,21 ಹೋಲಿಸಿರಿ. **19**

**4:19** ಗಲಾತ್ಯದಲ್ಲಿರುವ ವಿಶ್ವಾಸಿಗಳು ಪೌಲನ ಆತ್ಮೀಕ ಮಕ್ಕಳಾಗಿದ್ದರು (1 ಕೊರಿಂಥ

4:15 ಹೋಲಿಸಿರಿ). ಅವರು ಹೊಸದಾಗಿ ಹುಟ್ಟಿದ್ದರು (ಯೋಹಾನ 3:3-8) ಅವನ ಪ್ರಯತ್ನದಿಂದಾಗಿ, ಒಬ್ಬ ಹೆಂಗಸಿಗೆ ಮಕ್ಕಳನ್ನು ಹೆರುವಾಗ ನೋವಾಗುತ್ತದೆಯೋ ಆ ರೀತಿಯ ನೋವಿನ ಪ್ರಯತ್ನವನ್ನು ಮಾಡಿದ್ದಾನೆ. ಈಗ ತಿರುಗಿ ನೋವನ್ನು ಅನುಭವಸುತ್ತಿದ್ದಾನೆ. ಅವರಿಗೆ ಇನ್ನೊಂದು ಆತ್ಮೀಕ ಹುಟ್ಟುವಿಕೆಯು ಬೇಕಾಗಿರಲಿಲ್ಲ (ಆ ರೀತಿಯಾಗಿ ಹೊಸ ಒಡಂಬಡಿಕೆಯಲ್ಲಿ ಆಗಬಹುದೆಂಬುದಾಗಿ ಎಲ್ಲಿಯೂ ಇಲ್ಲ, ನಿಜವಾಗಿಯೂ ಹೇಗೆ ಒಬ್ಬ ವ್ಯಕ್ತಿಯು ದೇವರ ಆತ್ಮನಿಂದ ಪದೇ ಪದೇ ಹುಟ್ಟಲು ಸಾಧ್ಯ? ಅವರಿಗೆ ಬೇಕಾಗಿರುವದೇನೆಂದರೆ ಕ್ರಿಸ್ತನು ಅವರಲ್ಲಿ ರೂಪಗೊಳ್ಳಬೇಕು ಅಂದರೆ, ಅವರಲ್ಲಿ ಈಗಾಗಲೇ ಇರುವ ಕ್ರಿಸ್ತನು ( ಗಲಾ 3:2,26-29) ಆತನ ಜೀವವನ್ನು ಅವರಲ್ಲಿ ಪೌಲನು ಜೀವಿಸಿದ ಹಾಗೆ ಜೀವಿಸಬೇಕು (2:20). ಅವರು ಯೋಚನೆಯಲ್ಲಿ ಮತ್ತು ನಡತೆಯಲ್ಲಿ ಬದಲಾಗಬೇಕಾಗಿತ್ತು (ರೋಮಾ 12:2; 13:14; 2 ಕೊರಿಂಥ 3:18; ಎಫೆ 4:13-15). **20**

**4:20** *"ಗೊಂದಲಕ್ಕೀಡಾದನು"*– ವ.11; 1:6; 3:1. ಅವರೊಂದಿಗೆ ಪತ್ರದ ಮೂಲಕ ಹೇಗೆ ಮಾತಾಡಬೇಕು ಎಂದು ತಿಳಿದನು. **21**

**4:21** *"ಧರ್ಮಶಾಸ್ತ್ರದ ಅಧೀನದಲ್ಲಿರುವ ಆಸೆ"*– ಇದು ಕೆಲವರಲ್ಲಿ ಇದ್ದಂತಹ ಒಂದು ದೊಡ್ಡ ತಪ್ಪು ಮತ್ತು ಧರ್ಮಶಾಸ್ತ್ರವು ಏನು ಹೇಳುತ್ತದೆಂಬುದಾಗಿ ತಿಳಿಯದ ಅಜ್ಞಾನದಿಂದಾಗಿ ಅವರು ಹೀಗಿದ್ದಾರೆಂದು ಪೌಲನಿಗೆ ತಿಳಿದಿತ್ತು. **22,23**

- **4:22,23** ಆದಿ 16:1-4; 17:15,16; 21:1-5; ರೋಮಾ 4:18-21. **24-31**

**4:24-31** ಹಳೆಯ ಒಡಂಬಡಿಕೆಯ ಅಬ್ರಹಾಮ, ಅಬ್ರಹಾಮನ ಹೆಂಡತಿ ಸಾರಳು ಮತ್ತು ದಾಸಿಯಾಗಿದ್ದ ಹಾಗಾರಳ ಕಥೆಗಳ ಮೂಲಕ ಆತ್ಮೀಕ ಪಾಠಗಳನ್ನು ಕಲಿಯುತ್ತಾನೆ ಅವರು ಚರಿತ್ರೆಯಲ್ಲಿ ನಿಜವಾದ ವ್ಯಕ್ತಿಗಳೆಂದು ಅವನಿಗೆ ತಿಳಿದಿತ್ತು. ಆದರೆ ಅವನು ಅವರನ್ನು ಆತ್ಮೀಕ ಮಾದರಿ ಅಥವಾ ಚಿತ್ರಣವಾಗಿ ಕಂಡನು. ಇಲ್ಲಿ ಕೆಲವು ಪಂಡಿತರು ಇದಕ್ಕೆ ವಿರೋಧವನ್ನು ವ್ಯಕ್ತ ಪಡಿಸಿದ್ದಾರೆ ಆದರೆ ಪೌಲನು ದೇವರ ಆತ್ಮನಿಂದ ಪ್ರೇರಿತಗೊಂಡನು ಮತ್ತು ಯಾವ ತಪ್ಪನ್ನು ಮಾಡುತ್ತಿರಲಿಲ್ಲ. ದೇವದರ್ಶನದ ಗುಡಾರ ಮತ್ತ ಸಂಪೂರ್ಣ ಧರ್ಮಶಾಸ್ತ್ರವು ಆತ್ಮೀಕ ಕಾರ್ಯಗಳ ನೆರಳಾಗಿದ್ದವು (ಇಬ್ರಿ 8:5; 10:1). ಸಂಪೂರ್ಣ ಹಳೆ ಒಡಂಬಡಿಕೆಯು ಒಂದು ಮಾದರಿ, ಆಕಾರ, ಚಿತ್ರ ಅಥವಾ ಕ್ರಿಸ್ತನಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯ ಆತ್ಮೀಕ ವಾಸ್ತವತೆಯ ನೆರಳುಗಳಾಗಿತ್ತು. ಖಂಡಿತವಾಗಿ, ಹಳೆ ಒಡಂಬಡಿಕೆಯ ಘಟನೆಗಳನ್ನು ಮತ್ತು ಅವುಗಳ ವಿವರಣೆಯನ್ನು ವ್ಯಾಖ್ಯಾಯನಿಸುವಾಗ ನಾವು ಎಚ್ಚರಿಕೆಯಿಂದಿರಬೇಕು. ದೇವರು ಪೌಲನಿಗೆ ವಿಶೇಷ ಸ್ಫೂರ್ತಿಯನ್ನು ತನ್ನ ಆತ್ಮನ ಮೂಲಕ ಕೊಟ್ಟನು ಮತ್ತು ಅವನ ಭೋಧನೆಯನ್ನು ದೋಷಪೂರಿತ ಬೋಧನೆಯನ್ನಾಗಿ ಮಾಡಿದನು. ನಮ್ಮ ಬಗ್ಗೆ ಇದು ನಿಜವಲ್ಲ. ಮತ್ತು ನಮ್ಮ ದಿನಗಳಲ್ಲಿ ಕೆಲವು ಸಾರಿ ಹಳೆಯ ಒಡಂಬಡಿಕೆಯ ಕೆಲವು ಭಾಗಗಳನ್ನು ವಿಚಿತ್ರವಾಗಿ ವ್ಯಾಖ್ಯಾಯಿಸುವುದನ್ನು ಮತ್ತು ಆತ್ಮೀಕತೆಯನ್ನಾಗಿಸುವ

ಕಾರ್ಯಗಳನ್ನು ಸಭೆಗಳಲ್ಲಿ ಕಾಣುತ್ತೇವೆ. **24,25**

**4:24,25** ಹಾಗಾರಳು ದೇವರು ಮೋಶೆಯೊಂದಿಗೆ ಸೀನಾಯಿ ಬೆಟ್ಟದಲ್ಲಿ ಮಾಡಿದ ಹಳೆಯ ಒಡಂಬಡಿಕೆಯನ್ನು ಪ್ರತಿನಿಧಿಸುತ್ತಾಳೆ (ವಿಮೋಚನಕಾಂಡ 19). ಸಾರಳು ಮತ್ತಾಯ 26:28 ರಲ್ಲಿ ಪ್ರಕಟಿಸಿದ ಕ್ರಿಸ್ತನ ಒಡಂಬಡಿಕೆಯನ್ನು ಪ್ರತಿನಿಧಿಸುತ್ತಾಳೆ. ಹಾಗಾರಳು ಒಬ್ಬ ದಾಸಿ ಮತ್ತು ಆಕೆಯ ಸಂತತಿಯು ಅಬ್ರಹಾಮನಿಗೆ ವಾಗ್ದಾನ ಮಾಡಿದ ಮಗನಲ್ಲ (ರೋಮಾ 9:7,8). ಹಾಗಾರಳು ಮೋಶೆಯ ಧರ್ಮಶಾಸ್ತ್ರದ, ಒಡಂಬಡಿಕೆಯನ್ನು ಕೊಟ್ಟ ಸಿನಾಯ್ ಪರ್ವತ ಮತ್ತು ಹಳೆ ಒಡಂಬಡಿಕೆಯನ್ನು ಅಭ್ಯಾಸ ಮಾಡುತ್ತಿದ್ದ ಯೆರೂಸಲೇಮಿನ ಚಿನ್ಹೆ. ಮತ್ತು ಹಳೆಯ ಒಡಂಬಡಿಕೆ, ಅಂದರೆ ಆತ್ಮೀಕ ಬಂಧನವೆಂದು ಅಥವಾ ಗುಲಾಮತನವೆಂದು ಪೌಲನು ಹೇಳುತ್ತಾನೆ (ವಚನಗಳು 1,9; 3:10,23 ). **26**

**4:26** ಸಾರಳು ಹೊಸ ಒಡಂಬಡಿಕೆಯ, ಮತ್ತು ಆತ್ಮೀಕ ವಾಸ್ತವದ ಕೇಂದ್ರವಾದ ಸ್ವರ್ಗೀಯ ಯರೂಸಲೇಮಿನ ಚಿನ್ಹೆ (ಇಬ್ರಿ 12:22). ಅಲ್ಲಿ ಬಂಧನವಿಲ್ಲ, ಗುಲಾಮತನವಿಲ್ಲ. ಮತ್ತು ವಿಶ್ವಾಸಿಗಳು ಹೊಸ ಯೆರೂಸಲೇಮಿಗೆ ಸಂಬಂಧ ಪಟ್ಟವರು, ಹಳೆಯದಕ್ಕಲ್ಲ. **27**

**4:27** ಯೆಶಾಯ 54:1 ನೋಡಿರಿ. ಇಸ್ರಾಯೇಲಿನ ವೈಭವುಳ್ಳ ಭವಿಷ್ಯದ ಬಗ್ಗೆ, ಅದು ಮೆಸ್ಸೀಯನ ಆಶೀರ್ವಾದದ ಅಧೀನಕ್ಕೆ ಮಾತಾಡಿದನು. ಬರುವುದರ ಕುರಿತು ಮತ್ತು ಆತನು ಹೊಸ ಯುಗವನ್ನು ಸ್ಥಾಪಿಸುವ ಬಗ್ಗೆ ಮಾತಾಡಿದನು. ಮೊದಲು ಫಲವಿಲ್ಲದ್ದಾಗಿತ್ತು, ಈಗ ದೇವರ ಕೃಪೆ ಮತ್ತು ಶಕ್ತಿಯಿಂದ ಫಲವುಳ್ಳದ್ದಾಗುತ್ತದೆ. **28**

**4:28** ಅಬ್ರಹಾಮನು ದೇವರ ವಾಗ್ದಾನದಲ್ಲಿ ನಂಬಿಕೆಯಿಟ್ಟನು ಮತ್ತು ದೇವರು ಅವನಿಗೆ ಇಸಾಕನನ್ನು ಕೊಟ್ಟನು. ದೇವರ ಅದ್ಭುತವಾದ – ಕೆಲಸ ಸಾಧಿಸುವ ದೇವರ ವಾಕ್ಯ, ಜೀವ ಕೊಡುವ ವಾಕ್ಯದ ಮೂಲಕ ಇಸಾಕನು ಅಸ್ತಿತ್ವಕ್ಕೆ ಬಂದನು. ಹಾಗೆಯೇ ಈಗ ವಿಶ್ವಾಸಿಗಳು ಹೋಸ ಜೀವವನ್ನು ಸ್ವೀಕರಿಕೊಳ್ಳುತ್ತಾರೆ ಮತ್ತು ಅಬ್ರಹಾಮನ ಆತ್ಮೀಕ ಸಂತತಿಗಳಾಗುತ್ತಾರೆ (ಯಾಕೋಬ 1:18; 1 ಪೇತ್ರ 1:23). "ವಾಗ್ದಾನ" ಇಲ್ಲಿ ಮೋಶೆಯ ಧರ್ಮಶಾಸ್ತ್ರವನ್ನು ತಾರತಮ್ಯಕ್ಕೆ ಒಳಪಡಿಸುತ್ತಾನೆ. **29**

**4:29** ಆದಿ 21:8,9 ನೋಡಿರಿ. ಇಷ್ಮಾಯೇಲನು ಮನುಷ್ಯರು ಹುಟ್ಟುವ ರೀತಿಯಲ್ಲಿ "ಸ್ವಾಭಾವಿಕವಾಗಿ" ಹುಟ್ಟಿದನು. ಅವನ ಹುಟ್ಟಿನ ವಿಷಯದಲ್ಲಿ ಯಾವುದೇ ಅಸ್ವಾಭಾವಿಕವಾದದ್ದೇನೂ ಇರಲಿಲ್ಲ. ಇಸಾಕನು "ಆತ್ಮೀಕ ರೀತಿಯಲ್ಲಿ" ಹುಟ್ಟಿದನು. ಅಂದರೆ ಅಬ್ರಹಾಮನು ಮತ್ತು ಸಾರಳು ಅವನ್ನು ಹೊಂದುವಂತೆ ದೇವರ ಆತ್ಮನು ಮಾಡಿದನು. ಮಾನುಷ ರೀತಿಯಲ್ಲಿ ಮಾತಾಡುವುದಾದರೆ ಅದು ಅಸಾಧ್ಯವಾಗಿತ್ತು (ಇಬ್ರಿ 11:11,12; ರೋಮಾ 4:18-21). ಇಷ್ಮಾಯೇಲನು ಇಸಾಕನಿಗೆ ಕಿರುಕುಳ ಕೊಟ್ಟಂತೆಯೇ ಹಳೆಯ ಒಡಂಬಡಿಕೆಯ ಅಧೀನದಲ್ಲಿದ್ದವರು ಮಾಡಿದರು (ಯೆಹೂದ್ಯರು) ಹೊಸ ಒಡಂಬಡಿಕೆಯ ಅಧೀನದಲ್ಲಿದ್ದವರನ್ನು ಹಿಂಸಿಸಿದರು (ಕ್ರಿಸ್ತನ ಹಿಂಬಾಲಕರನ್ನು). ಅಪೊ

5:40; 7:54-58; 13:49,50; 14:19 ಮುಂತಾದವುಗಳು. ಮತ್ತು ಅದರಂತೆಯೇ ಆತ್ಮೀಕ ರೀತಿಯಲ್ಲಿ ಇಲ್ಲದ ಜನರು ಎಲ್ಲಾ ಯುಗಗಳಲ್ಲಿಯೂ ಆತ್ಮೀಕ ಜನರನ್ನು ಹಿಂಸಿಸುತ್ತಾರೆ.
**30**

**4:30** *"ಶಾಸ್ತ್ರ"*– ಆದಿ 21:10. ಆದಿ 21:10. ಇದರ ಆತ್ಮೀಕ ಅರ್ಥವೇನೆಂದರೆ ಧರ್ಮಶಾಸ್ತ್ರದ ಮೂಲಕ ರಕ್ಷಣೆಯನ್ನು ಹೊಂದಲು ಪ್ರಯತ್ನಿಸುತ್ತಿರುವವರು ಬಂಧನದಲ್ಲಿದ್ದಾರೆ ಮತ್ತು ದೇವರ ಕೃಪೆಯಿಂದ ರಕ್ಷಣೆಯನ್ನು ಸ್ವೀಕಸಿರಿದವರೊಂದಿಗೆ ಮತ್ತು ದೇವರ ಸ್ವಾತಂತ್ರ್ಯದ ಕೃಪೆಯಲ್ಲಿ ಅವರಿಗೆ ಸ್ಥಳವಿಲ್ಲ. ಈ ಎರಡು ಸಂಪೂರ್ಣವಾಗಿ ಬೇರೆ ಬೇರೆ ಮಾರ್ಗಗಳಾಗಿವೆ ಅವು ಬೆರೆಯುವುದಿಲ್ಲ. ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯು ಯಾವುದೇ ರೀತಿಯಲ್ಲಿಯೂ ಜೋಡನೆಯಾಗುವುದಿಲ್ಲ ಮತ್ತು ಅದನ್ನು ಮೂರನೆಯ ಕಾರ್ಯವಾಗಿ ಮಾಡಲಾಗುವುದಿಲ್ಲ. ಆ ರೀತಿ ಮಾಡಲು ಪ್ರಯತ್ನಿಸಿದರೆ ಅದು ವ್ಯತಿರಿಕ್ತವಾದ ಸುವಾರ್ತೆಯನ್ನು ಹುಟ್ಟಿಸುತ್ತದೆ (ಗಲಾ 1:7). **31**

**4:31** ಇದರ ಅರ್ಥ ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ಮೋಶೆಯ ಧರ್ಮಶಾಸ್ತ್ರದೊಂದಿಗೆ, ಹಳೆಯ ಒಡಂಬಡಿಕೆಯೊಂದಿಗೆ, ಯೆಹೂದ್ಯ ಧರ್ಮದೊಂದಿಗೆ ಸಂಪರ್ಕವಿರುವುದಿಲ್ಲ. ಅವರು ಹೊಸ ಒಡಂಬಡಿಕೆಯ ಮಕ್ಕಳು ಮಾತ್ರವಾಗಿರುತ್ತಾರೆ. ಅವರು ದೇವರ ಶಕ್ತಿಯಿಂದ ಕ್ರಿಸ್ತನ ಸುವಾರ್ತೆಯ ಮೂಲಕ ಹೊಸದಾಗಿ ಹುಟ್ಟಿದವರು. ಹೊಸ ಒಡಂಬಡಿಕೆ ಮತ್ತು ಹಳೆಯ ಒಡಂಬಡಿಕೆಗಳ ಇನ್ನು ಎರಡು ಹೊಂದಾಣಿಕೆಗಳಿಗಾಗಿ 2 ಕೊರಿಂಥ 3:6-18; ಇಬ್ರಿ 8:6-10; 12:18-24.

# 5 1

**5:1** ಸ್ವ-ಪ್ರಯತ್ನ ಮತ್ತು ಧರ್ಮಶಾಸ್ತ್ರವನ್ನು ಅನುಸರಿಸುವುದು ಮತ್ತು ನೇಮ ನಿಷ್ಠೆಗಳನ್ನು ಪಾಲಿಸುವುದು ಇವೆಲ್ಲವೂ ರಕ್ಷಣೆಯ ಮಾರ್ಗವೆಂದು ಬೋಧಿಸುವ ಎಲ್ಲಾ ಬೋಧನೆಗಳು ದಾಸತ್ವದ ನೊಗವಾಗಿದೆ (4:3-9). ವಿಶೇಶವಾಗಿ, ಮೋಶೆಯ ಧರ್ಮಶಾಸ್ತ್ರವು ಪೌಲನ ಮನಸ್ಸಿನಲ್ಲಿತ್ತು (ಅಪೊ 15:10,11 ಹೋಲಿಸಿರಿ). ಆ ರೀತಿಯ ಎಲ್ಲಾ ನೊಗಗಳಿಂದ ವಿಶ್ವಾಸಿಗಳನ್ನು ಕ್ರಿಸ್ತನು ಬಿಡುಗಡೆಮಾಡಿದ್ದಾನೆ. ಇದರ ಅರ್ಥವೇನೆಂದರೆ ಆತನು ನಮ್ಮನ್ನು ಎಲ್ಲಾ ರೀತಿಯ ಧಾರ್ಮಿಕ ಬಂಧನದಿಂದ ಅದು ಒಂದು ವೇಳೆ ಯೆಹೂದ್ಯ ಮತವಾಗಿರಬಹುದು ಅಥವಾ ಬೇರೆ ಯಾವುದೇ ಮತವಾಗಿರಬಹುದು ಅಥವಾ ವ್ಯತಿರಿಕ್ತತೆಯ ಕ್ರೈಸ್ತಮತವಾಗಿರಬಹುದು. ಬಿಡುಗಡೆ ಎಂದರೆ ಬಿಡುಗಡೆ. ಕ್ರಿಸ್ತನಲ್ಲಿರುವ ವಿಶ್ವಾಸಿಗಳು ತಮ್ಮ ಸ್ವಾತಂತ್ರ್ಯವನ್ನು ಅಮೂಲ್ಯವೆಂದು ಪರಿಗಣಿಸ ಬೇಕು ಮತ್ತು ಅದನ್ನು ಬಿಟ್ಟುಕೊಡಬಾರದು. ಅವರು ಕ್ರಿಸ್ತನೊಂದಿಗೆ ಜೋಡಿಸಲ್ಪಟ್ಟಿದ್ದಾರೆ (ಮತ್ತಾಯ 11:28-30). ಅವರಿಗೆ ಬೇಕಾಗಿರುವ ನೊಗವು ಇದೊಂದೇ ಆಗಿದೆ. ಮತ್ತು ಈ ನೊಗವು

ಸ್ವಾತಂತ್ರ್ಯವನ್ನು ತರುತ್ತದೆ. **2-12**

**5:2-12** ಇಲ್ಲಿ ಪೌಲನು ಧರ್ಮಶಾಸ್ತ್ರ ಮತ್ತು ಕೃಪೆಯ ಈ ಎರಡು ಮಾರ್ಗಗಳು ಬೆರೆಯಲು ಅಸಾಧ್ಯವೆಂಬುದನ್ನು ಸರಳ ಭಾಷೆಯಲ್ಲಿ ತಿಳಿಸುತ್ತಾನೆ. ನಾವು ಯಾವುದಾದರು ಒಂದನ್ನು ಆರಿಸಿಕೊಳ್ಳಬೇಕು. ಅವರು ಎರಡನ್ನು ಹೊಂದಲು ಸಾಧ್ಯವಿಲ್ಲ. ದೇವರ ಕೃಪೆ ಮತ್ತು ಸ್ವ-ಪ್ರಯತ್ನ ಇವೆರಡರಿಂದ ಮನುಷ್ಯನು ರಕ್ಷಣೆ ಹೊಂದಲು ಸಾಧ್ಯವಿಲ್ಲ, ನಂಬಿಕೆ ಮತ್ತು ನೇಮನಿಷ್ಠೆಗಳನ್ನು ಪಾಲಿಸುವುದು ಮತ್ತು ನಿಯಮಗಳು ಮತ್ತು ಧರ್ಮಶಾಸ್ತ್ರವನ್ನು ಅನುಸರಿಸುವುದು. **2**

**5:2** *"ಪೌಲನಾದ ನಾನು"*– ಕ್ರಿಸ್ತನ ಅಪೋಸ್ತಲನಾಗಿ ಸಂಪೂರ್ಣ ಅಧಿಕಾರದಿಂದ ಮಾತಾಡುತ್ತಾನೆ (1:1), ಸುವಾರ್ತೆಯು ಕ್ರಿಸ್ತನಿಂದಲೇ ತನಗೆ ಪ್ರಕಟವಾದ ರೀತಿಯಲ್ಲಿ (1:12).

*"ಸುನ್ನತಿ"*– ಆದಿ 17:11-14; ಯಾಜಕ 12:3 ರಲ್ಲಿನ ಟಿಪ್ಪಣಿ. ಸುನ್ನತಿಯು ದೈಹಿಕವಾದ ಕ್ರೀಯೆ ಸ್ವತಃ ಏನೂ ಇಲ್ಲದ್ದು. ಆದರೆ ಅವರಿದ್ದ ಸನ್ನಿವೇಶದ ಬಗ್ಗೆ ಪೌಲನು ಮಾತಾಡುತ್ತಿದ್ದಾನೆ. ಗಲಾತ್ಯದವರು ಸುಳ್ಳು ಬೋಧಕರ ಬೋಧನೆಯನ್ನು ಒಪ್ಪಿಕೊಂಡರೆ ಮತ್ತು ಸುನ್ನತಿಯ ಧಾರ್ಮಿಕ ಆಚರಣೆಯನ್ನು ತಮ್ಮ ಕೈಯಾರೆ ಸ್ವೀಕರಿಸುವುದಾದರೆ, ತಮ್ಮನ್ನು ಮೋಶೆಯ ಧರ್ಮಶಾಸ್ತ್ರಕ್ಕೆ ಅಧೀನಪಡಿಸಿಕೊಳ್ಳುತ್ತಾರೆ, ಹೊಸ ಒಡಂಬಡಿಕೆಯ ಪ್ರಯೋಜನೆಗಳನ್ನು ಹೊಂದಲಾರರು. ಅವರು ರಕ್ಷಣೆ ಹೊಂದಲು ಕ್ರಿಸ್ತನ ಮಾರ್ಗವನ್ನು ಅಥವಾ ಎಂದೂ ರಕ್ಷಿಸಲಾರದ ಮೋಶೆಯ ಧರ್ಮಶಾಸ್ತ್ರವನ್ನು ಆರಿಸಿಕೊಳ್ಳಬೇಕು. **3**

**5:3** ಆ ಸನ್ನಿವೇಶದಲ್ಲಿ ಸುನ್ನತಿಯು ಅವರನ್ನು ಯೆಹೂದ್ಯ ಮತಕ್ಕೆ ಮತಾಂತರ ಹೊಂದುವಂತಾಗುತ್ತದೆಂದು ಅವನ ಅರ್ಥ ಮತ್ತು ಅದರಿಂದಾಗಿ ಅವರು ಮೋಶೆಯ ಸಂಪೂರ್ಣ ಧರ್ಮಶಾಸ್ತ್ರವನ್ನು ಕಡ್ಡಾಯವಾಗಿ ಅನುಸರಿಸಬೇಕಾಗುತ್ತದೆ. ಮತ್ತು ಅವನು ಆಗಲೆ ತಿಳಿಸಿದಂತೆ, ಇದು ಆಶೀರ್ವಾದವನ್ನು ತರುವುದಿಲ್ಲ ಆದರೆ ಶಾಪವನ್ನು ತರುತ್ತದೆ (3:10-12). **4**

**5:4** *"ಕ್ರಿಸ್ತನಿಂದ ಅಗಲಿ ಹೋದರು"*– ಇದರ ಅರ್ಥ ಏನೆಂದರೆ ಅಂತವರು ಕ್ರಿಸ್ತನು ತಮ್ಮ ಜೀವಿತದಲ್ಲಿ ಫಲದಾಯಕವಾಗಿ ಕೆಲಸಮಾಡುವುದನ್ನು ತಳ್ಳಿ ಹಾಕುವವರಾಗಿದ್ದಾರೆ. ಆತನು ಚಟುವಟಿಕೆಯಿಂದಿರುವ ಕೃಪೆಗೆ ತಮ್ಮ ಬೆನ್ನು ತೋರಿಸುವವರಾಗಿದ್ದಾರೆ.

*"ಕೃಪಾಶ್ರಯದೊಳಗಿಂದ ಬಿದ್ದು ಹೋದರು"*– ವಿಶ್ವಾಸಿಗಳು ಹಾಗೆ ಮಾಡುತ್ತಾರೆಂದು ಪೌಲನು ಹೇಳುತ್ತಿಲ್ಲ. ವಾಸ್ತವವಾಗಿ, ಗಲಾತ್ಯದ ಕ್ರೈಸ್ತರು ಬಲಹೀನ ಮತ್ತು ದುರ್ಬಲರಾಗಿದ್ದರೂ ಸಹ ಹಾಗೆ ಮಾಡುವುದಿಲ್ಲವೆಂಬ ದೃಢತೆ ಅವನಿಗಿತ್ತು (ವ.10). ಆದರೆ ಈ ತತ್ವವನ್ನು ಅವನು ಒತ್ತಯಿಸುತ್ತಿದ್ದಾನೆ: ನಿಯಮ ಮತ್ತು ಕೃಪೆಯು ಬೆರೆಯಲು ಸಾಧ್ಯವಿಲ್ಲ, ನಂಬಿಕೆಯ ಮಾರ್ಗ ಮತ್ತು ಸ್ವ-ಪ್ರಯತ್ನದ ಮಾರ್ಗ ಅವುಗಳಲ್ಲಿ

ಸಾಮಾನ್ಯವಾದದ್ದು ಯಾವುದು ಇಲ್ಲ. ನಿಯಮಕ್ಕೆ ಅಧೀನರಾಗಿ, ನಿಮಯಗಳನ್ನು ಮತ್ತು ಆಚರಣೆಗಳನ್ನು ಅವಲಂಭಿಸುವುದಾದರೆ ಅದು ಕೃಪೆಯ ಮಾರ್ಗವನ್ನು ತಿರಸ್ಕರಿಸಿದಂತಾಗುತ್ತದೆ. ಪಾಪದಲ್ಲಿ ಬಿದ್ದು ಹೋದರೆ ವಿಶ್ವಾಸಿಗಳು ತಮ್ಮ ರಕ್ಷಣೆಯನ್ನು ಕಳೆದುಕೊಳ್ಳುತ್ತಾರೆಂದು ಪೌಲನು ಇಲ್ಲಿ (ಎಲ್ಲಿಯೂ ಸಹ) ಬೋಧಿಸುತ್ತಿಲ್ಲ (ರೋಮಾ 5:9,10; 8:29-39; 1 ಯೋಹಾನ 1:9; 2:1 ಹೋಲಿಸಿರಿ). "ಕೃಪಾಶ್ರಯದೊಳಗಿಂದ ಬಿದ್ದು ಹೋದರು" ಎಂದು ಹೇಳುವಾಗ ನಾವೆಲ್ಲರು ಸಾಮಾನ್ಯ ಶೋಧನೆಯೊಳಗೆ ಬಿದ್ದಿದ್ದೇವೆಂದು ಅರ್ಥವಲ್ಲ. ಮನುಷ್ಯರು ದೇವರ ಕೃಪೆಯಿಂದ ಮಾತ್ರವೇ ರಕ್ಷಿಸಲ್ಪಡುವವರು ಎಂಬ ಬೋಧನೆಯಿಂದ ದೂರವಾಗಿದ್ದಾರೆಂದು ಅರ್ಥ. ಸುವಾರ್ತೆಯ ಸತ್ಯತೆಯಲ್ಲಿ ಬೇರೂರದವರು ಈ ರೀತಿ ವಂಚಿಸಲ್ಪಡುತ್ತಾರೆ ಆದರೆ ಕೃಪೆಯ ಸುವಾರ್ತೆಯನ್ನು ನಿರಂತರಕ್ಕೂ ತ್ಯಜಿಸುವುದು – ಇದು ಬೇರೆಯಾಗಿದೆ. ಇದನ್ನು ಮಾಡುವವರು ನಿಜವಾಗಿಯೂ ಕ್ರಿಸ್ತನಿಗೆ ಸೇರಿದವರಲ್ಲವೆಂದು ತೋರಿಸಿಕೊಳ್ಳುತ್ತಾರೆ (1 ಯೋಹಾನ 2:19). ಕ್ರಿಸ್ತನು ತನ್ನ ಕುರಿಗಳನ್ನು ಕಾಪಾಡುತ್ತಾನೆ ಮತ್ತು ಅವುಗಳು ನಿರಂತರಕ್ಕೂ ಬಿದ್ದು ಹೋಗುವುದಿಲ್ಲ ಮತ್ತು ಕಳೆದು ಹೋಗುವುದಿಲ್ಲ (ಯೋಹಾನ 10:27,28; 17:11,12). **5**

**5:5** *"ನಾವು"*– ನಾವು ಕ್ರಿಸ್ತನಲ್ಲಿ ನಿಜ ವಿಶ್ವಾಸಿಗಳಾಗಿದ್ದೇವೆ, ನಾವು ಧರ್ಮಶಾಸ್ತ್ರದ ಮತ್ತು ಸ್ವ-ಪ್ರಯತ್ನದ ಮಾರ್ಗವನ್ನು ತಿರಸ್ಕರಿಸುತ್ತೇವೆ. ಧರ್ಮಶಾಸ್ತ್ರವು ಬಂಧನವನ್ನು ಮತ್ತು ಮರಣವನ್ನು ತರುತ್ತದೆ. ನಂಬಿಕೆಯು ದೇವರ ಅಂತಿಮ ವಾಗ್ದಾನದ ನೆರವೇರಿಕೆಯ ನಿರೀಕ್ಷೆಯನ್ನು ಹುಟ್ಟಿಸುತ್ತದೆ (3:8,29). ರೋಮಾ 8:23-25 ಹೋಲಿಸಿರಿ. ವಿಶ್ವಾಸಿಗಳಿಗೆ ಆಗಲೇ ದೇವರ ನೀತಿಯು ಎಣಿಸಲ್ಪಟ್ಟಿದೆ ಎಂದು ಇಲ್ಲಿಯ ಅರ್ಥವಲ್ಲ (2:16; ರೋಮಾ 3:21-24; 5:1), ಆದರೆ ಎಲ್ಲದರಲ್ಲಿಯೂ ನಿಜವಾಗಿಯೂ ಸಂಪುರ್ಣವಾಗಿ ನೀತಿವಂತರನ್ನಾಗಿ ಮಾಡಲ್ಪಟ್ಟಿರುವುದು (ರೋಮಾ 8:29; 1 ಯೋಹಾನ 3:2). ಮತ್ತು ದೇವರಾತ್ಮನಿಂದ ಪ್ರೇರಿಸಲ್ಪಟ್ಟ ಮಹಿಮೆಯುಳ್ಳ ನಿರೀಕ್ಷೆಯ ಭವಿಷ್ಯವನ್ನು ಎದುರುನೋಡುತ್ತದೆ. **6**

**5:6** 6:15; 1 ಕೊರಿಂಥ 7:19; ರೋಮಾ 2:28,29; 4:9-12 ನೋಡಿರಿ. ಹೊರ ಆಚರಣೆಗಳ ಬಗ್ಗೆ ಇದು ನಿಜವಾಗಿದೆ. ದೇವರು ಒಪ್ಪಿಕೊಳ್ಳುವಂತೆ ಮಾಡಲು ಯಾವ ಮನುಷ್ಯನಿಂದಲೂ ಸಾಧ್ಯವಿಲ್ಲ. ದೇವರು ಮನುಷ್ಯರನ್ನು ನೀತಿವಂತರೆಂದು ಎಣಿಸುತ್ತಾನೆ ಮತ್ತು ನಂಬಿಕೆ ಮಾತ್ರ ಅವರನ್ನು ರಕ್ಷಿಸುತ್ತಾನೆ. ಮತ್ತು ಅವರು ರಕ್ಷಿಸಲ್ಪಟ್ಟನಂತರ ನಂಬಿಕೆಯಲ್ಲಿ ನಡೆಯಬೇಕು ಮತ್ತು ಒಬ್ಬರನ್ನೊಬ್ಬರು ಪ್ರೀತಿಸಬೇಕೆನ್ನುವ ಕ್ರಿಸ್ತನ ಆಜ್ಞೆಗೆ ವಿಧೇಯರಾಗಬೇಕು (ಯೋಹಾನ 13:34; 15:12). ಎಷ್ಟೇ ನಿಯಮಗಳನ್ನು ಅನುಸರಿಸಿದರು ಅಥವಾ ಆಚರಣೆಗಳನ್ನು ಆಚರಿಸಿದರೂ ಕ್ರಿಸ್ತನನ್ನು ನಂಬದೆ ಮತ್ತು ಪ್ರೀತಿಸದಿದ್ದರೆ ಅದರಿಂದ ಸಾಧ್ಯವಾಗುವ ಒಳ್ಳೆಯದಾದರು ಏನು? ನಂಬಿಕೆಯ ಫಲದಿಂದಾಗುವ ಪ್ರೀತಿಯು ಅವುಗಳಲ್ಲಿ

ಒಂದಲ್ಲ. ಆದರೆ ಅದು ಮಾತ್ರವೇ ಎಣಿಸಲ್ಪಡುತ್ತದೆ. **7**

**5:7** *"ನೀವು ಚೆನ್ನಾಗಿ ಓಡುತ್ತಾ ಇದ್ದೀರಿ"*– 1 ಕೊರಿಂಥ 9:24; ಇಬ್ರಿ 12:1.

*"ಯಾರು ನಿಮ್ಮನ್ನು ತಡೆದರು"*– 1:7. **8**

**5:8** ಅವರನ್ನು ಕರೆದಾತನು ದೇವರು (1:6). ಅವರು ಸತ್ಯಕ್ಕೆ ವಿಧೇಯರಾಗದಂತೆ ತಡೆದವನು ನಿಶ್ಚಯವಾಗಿಯೂ ಆತನಲ್ಲ. **9**

**5:9** 1 ಕೊರಿಂಥ 5:6-8 ನೋಡಿರಿ. ಸ್ವಲ್ಪ ಸುಳ್ಳು ಬೋಧನೆಯಾದರೂ ಸಹ ಕ್ರಮೇಣವಾಗಿ ಸಭೆಯ ಮೇಲೆ, ಸಂಪೂರ್ಣ ಇಡೀ ಪಂಗಡದ ಮೇಲೆ ಪರಿಣಾಮ ಬೀರುತ್ತದೆ. **10**

**5:10** ಕೃಪೆಯ ಮಾರ್ಗದಿಂದ ಬಿದ್ದುಹೋಗುವುದರ ವಿಷಯವಾಗಿ ಅವರನ್ನು ಎಚ್ಚರಿಸಿದ ನಂತರ (ವ.4), ಅವರು ಬಿದ್ದುಹೋಗುವುದಿಲ್ಲವೆಂಬ ಭರವಸೆಯನ್ನು ಅವನು ವ್ಯಕ್ತಪಡಿಸುತ್ತಾನೆ. ಅವನು ಬರೆದ ಸತ್ಯವನ್ನು ಅವರು ಒಪ್ಪಿಕೊಳ್ಳುವಂತೆ ಕರ್ತನು ತಾನೇ ಅವನು ಭರವಸೆಯಿಂದಿರುವಂತೆ ಮಾಡಿದನು. ಇಬ್ರಿ 6:9 ನಂತರ ಇಬ್ರಿ 6:4-8 ಮತ್ತು ಇಬ್ರಿ 10:39 ನಂತರ ಇಬ್ರಿ 10:26-31 ಹೋಲಿಸಿರಿ. ಅವರನ್ನು ದಾರಿತಪ್ಪಿಸುತ್ತಿದ್ದ ಸುಳ್ಳು ಬೋಧಕ (ಅಥವಾ ಬೋಧಕರುಗಳ) ವಿಷಯಲ್ಲಿ, ದೇವರ ನ್ಯಾಯತೀರ್ಪು ತಕ್ಕ ಸಮಯದಲ್ಲಿ ಅವರ ಮೇಲೆ ಬರುತ್ತದೆಂದು ನಂಬಿದನು 2 ಪೇತ್ರ 2:1-3 ಹೋಲಿಸಿರಿ. **11**

**5:11** ಸುನ್ನತಿಯು ರಕ್ಷಣೆಗೆ ಅಗತ್ಯವೆಂಬುದು ಪೌಲನು ಬೋಧಿಸಿದನೆಂದು ಅಲ್ಲಿ ಯಾರಾದರು ಹೇಳಿದರೋ? ಹಾಗಿದ್ದರೆ, ಇದು ಸುಳ್ಳಾಗಿದೆ.

*"ಹಿಂಸೆ"*– ಮೋಶೆಯ ಧರ್ಮಶಾಸ್ತ್ರವು ರಕ್ಷಣೆಯ ಮಾರ್ಗವಲ್ಲವೆಂದು, ಸುನ್ನತಿಯು ಆತ್ಮಿಕವಾಗಿ ಕ್ರೈಸ್ತರಿಗೆ ಯಾವ ಪ್ರಯೋಜನವಿಲ್ಲವೆಂದು ಪೌಲನು ಬೋಧಿಸಿದ್ದರಿಂದ ಯೆಹೂದ್ಯರು ಅವನನ್ನು ಹಿಂಸಿಸಿದರು.

*"ಶಿಲುಬೆಯ ಆಕ್ಷೇಪ"*– 1 ಕೊರಿಂಥ 1:23 ಹೋಲಿಸಿರಿ. ಈ ಆಕ್ಷೇಪಣೆ ಏನು? ಮೋಶೆಯ ಧರ್ಮಶಾಸ್ತ್ರದ ಕಡೆಗೆ ತಿರುಗಿಕೊಳ್ಳುವುದರ ಮೂಲಕ ಈ ಆಕ್ಷೇಪಣೆಯು ಹೇಗೆ ನಿಂತು ಹೋಗುತ್ತದೆ? ಆಕ್ಷೇಪಣೆ ಏನೆಂದರೆ ಕ್ರಿಸ್ತನ ಶಿಲುಬೆಯು ಮಾನವನು ಪಾಪದಲ್ಲಿ ಸಂಪೂರ್ಣವಾಗಿ ನಾಶವಾಗಿದ್ದಾರೆಂದು ಪ್ರಕಟಿಸುತ್ತದೆ. ಜನರು ಬಹಳ ಕೆಟ್ಟವರಾಗಿದ್ದಾರೆಂದು ಮತ್ತು ಬಲಹೀನರಾಗಿ ಸ್ವ-ಪ್ರಯತ್ನದಿಂದ, ಧರ್ಮವನ್ನು ಅನುಸರಿಸುವುದರಿಂದ, ನೇಮನಿಷ್ಠೆಗಳನ್ನು ಆಚರಿಸುವುದರಿಂದ ಎಂದಿಗೂ ರಕ್ಷಣೆ ಹೊಂದಲು ಸಾಧ್ಯವಿಲ್ಲವೆಂದು ಪ್ರಕಟಪಡಿಸುತ್ತದೆ, ಅವರ ಒಂದೇ ಒಂದು ನೀರೀಕ್ಷೆ ಎಂದರೆ ದೇವರ ಕುಮಾರನು ಅವರ ಸ್ಥಳದಲ್ಲಿ ಮರಣಿಸುವುದು. ಇದು ಜನರ ಪ್ರತಿಷ್ಠೆಯನ್ನು ಮತ್ತು ಆತ್ಮಗೌರವವನ್ನು ಹೊಡೆಯುತ್ತದೆ ಮತ್ತು ಅವರನ್ನು ಧೂಳಾಗಿ ಕ್ರಿಸ್ತನ ಪಾದದಲ್ಲಿ ಬೀಳಿಸುತ್ತದೆ, ಆದ್ದರಿಂದ ಅದು ಅವರಿಗೆ ಆಕ್ಷೇಪಣೆಯಾಗಿದೆ. ರಕ್ಷಣೆಗೆ ಬೇಕಾದ ಆಚರಣೆ ಮತ್ತು ಧಾರ್ಮಿಕ ನಿಯಮಗಳನ್ನು ಪಾಲಿಸಬೇಕೆಂಬ ಬೋಧನೆಯಲ್ಲಿ ಶಿಲುಬೆಯ ವಿಷಯವಾದ ಆಕ್ಷೇಪಣೆ

ಇಲ್ಲ. ಇದನ್ನೇ ಅನೇಕ ಧಾರ್ಮಿಕ ಜನರು ಕೇಳಿಸಿಕೊಳ್ಳಲು ಬಯಸುತ್ತಾರೆ. ಇದರಿಂದ ದೇವರೊಂದಿಗೆ ಯೋಗ್ಯತೆಯನ್ನು ಕೂಡಿಟ್ಟುಕೊಳ್ಳಬಹುದೆಂದು ಮತ್ತು ಅವರು ಮಾಡುವ ಕೆಲಸಗಳ ಮೂಲಕ ತಮ್ಮನ್ನು ರಕ್ಷಿಸಿಕೊಳ್ಳಬಹುದೆಂದು ಯೋಚಿಸುತ್ತಾರೆ. ಈ ರೀತಿಯ ಬೋಧನೆಯು ಅವರ ಕರುಡು ಹೃದಯಗಳಿಗೆ ನಿಜವಾಗಿಯೂ ಒಪ್ಪುತ್ತದೆ. 5:12 "ನಿಮ್ಮನ್ನು ಕಳವಳಪಡಿಸುವವರು" – ದೇವರ ಸತ್ಯದ ವಿರುದ್ಧವಾಗಿ ದಂಗೆ ಏಳುವಂತೆ ಗಲಾತ್ಯ ಕ್ರೈಸ್ತರನ್ನು ಸುಳ್ಳುಬೋಧಕರು ಪ್ರಚೋದಿಸುತ್ತಿದ್ದರು. ತಾವೇ ಸೃಷ್ಟಿಸಿಗಳಕೊಂಡ ವಿಗ್ರಹಗಳನ್ನು ದೇವಾಲಯಗಳಲ್ಲಿ ಪೂಜಿಸುವ ಮತಾಂಧ ಪೂಜಾರಿಗಳಿಗಿಂತಲೂ ಇವರು ಉತ್ತಮರಲ್ಲವೆಂದು ಪೌಲನು ಸೂಚಿಸುತ್ತಾನೆ. **13**

**5:13** ಪೌಲನು ಈಗ ಇಲ್ಲಿಯ ತನಕ ಅವನು ಬರೆದ ಸತ್ಯದ ಪ್ರಾಯೋಗಿಕ ಅನ್ವಯಕ್ಕೆ ತಿರುಗಿಕೊಳ್ಳುತ್ತಾನೆ. ಇದು ಅವನ ಸಾಮಾನ್ಯವಾದ ಮಾದರಿಯಾಗಿದೆ – ಅವನು ಸತ್ಯದ ಅಸ್ತಿವಾರವನ್ನು ಹಾಕುತ್ತಾನೆ ನಂತರ ವಿಶ್ವಾಸಿಗಳು ಅದರಂತೆ ನಡೆಯಬೇಕೆಂದು ಬೇಡಿಕೊಳ್ಳುತ್ತಾನೆ, ರೋಮಾ 12:1,2; ಎಫೆ 4:1.

"*ಸ್ವಾತಂತ್ರ್ಯ*"– ವ.1. ನಾವು ಪಾಪದ ಜೀವಿತವನ್ನು ಜೀವಿಸಲು ಕ್ರಿಸ್ತನು ನಮಗೆ ಬಿಡುಗಡೆಯನ್ನು ಕೊಡುವುದಿಲ್ಲ (ಪಾಪ ಮಾಡುವುದು ಸ್ವಾತಂತ್ರ್ಯವಲ್ಲ ಆದರೆ ಅತ್ಯಂತ ಕೆಟ್ಟದಾದ ಬಂಧನ – ಯೋಹಾನ 8:34; ರೋಮಾ 6:16). ನಾವು ಸಮ್ಮತಿಯುಳ್ಳ ದೇವರ ಮತ್ತು ಇತರರ ಸೇಕರಾಗಬೇಕೆಂದು ಕ್ರಿಸ್ತನು ನಮ್ಮನ್ನು ಬಿಡುಗಡೆ ಮಾಡಿದನು. ರೋಮಾ 6:15-23 ನೋಡಿರಿ.

"*ಶರೀರ*"– ಗ್ರೀಕ್ ಭಾಷೆಯಲ್ಲಿ "ಸಾರಕ್ಸ್" , ನಾವು ಸ್ವಾಭಾವಿಕವಾದವರೆಂದು ಸೂಚಿಸಲು ಪೌಲನು ಈ ಪದವನ್ನು ಉಪಯೋಗಿಸಿದನು. ರೋಮಾ 7:5,18; 8:3,5,8. ಕ್ರೈಸ್ತರು ಧರ್ಮಶಾಸ್ತ್ರದಿಂದ ಪಾಪ ಸ್ವಭಾವದಲ್ಲಿ ಮುಂದುವರಿಯಲು ಬಿಡುಗಡೆ ಹೊಂದುವುದಿಲ್ಲ – ಅದಕ್ಕೆ ತದ್ವಿರುದ್ಧವಾಗಿದೆ (ರೋಮಾ 6 ನೋಡಿರಿ). **14**

**5:14** ಅವರು ಧರ್ಮಶಾಸ್ತ್ರದ ಅಧೀನದಲ್ಲಿರಬೇಕಾಗಿತ್ತೋ (4:21)? ನಿಯಮಗಳನ್ನು ಮತ್ತು ಧರ್ಮಶಾಸ್ತ್ರದ ಆಚರಣೆಗಳನ್ನು ಮರೆತುಬಿಡಿ ಮತ್ತು ಧರ್ಮಶಾಸ್ತ್ರದ ಸಂಪೂರ್ಣ ಸಾರ – ಪ್ರೀತಿಯನ್ನು ನೆರವೇರಿಸಿ ಎಂದು ಪೌಲನು ಹೇಳುತ್ತಾನೆ (ಯಾಜಕ 19:18; ಮತ್ತಾಯ 22:39; ರೋಮಾ 13:8-10; ಯಾಕೋಬ 2:8). ನಿಜವಾಗಿ ನೋಡುವುದಾದರೆ ಧರ್ಮಶಾಸ್ತ್ರದ ಸಾರವನ್ನು ಕ್ರಿಸ್ತನನ್ನು ನಂಬಿದವರು ಮತ್ತು ಆತನ ಆತ್ಮವನ್ನು ಹೊಂದಿದವರು ಮಾತ್ರ ನೆರವೇರಿಸಬಹುದು (ರೋಮಾ 8:4). **15**

**5:15** ಈ ಸುಳ್ಳು ಬೋಧಕರು ಕಲಹ ಮತ್ತು ವಿಭಜನೆಯನ್ನು ತಂದರು. ಇವರ ಚಟುವಟಿಕೆಯ ಒಂದು ಫಲಿತಾಂಶ ಯಾವಾಗಲೂ ಇದೇ ಆಗಿರುತ್ತದೆ (ರೋಮಾ 16:17). ದೇವರು ತನ್ನ ಜನರು ಸತ್ಯ ಮತ್ತು ಪ್ರೀತಿಯಲ್ಲಿ ಐಕ್ಯದಿಂದ ರಬೇಕೆಂದು ಬಯಸುತ್ತಾನೆ –

ಸತ್ಯವಿಲ್ಲದೆ ಪ್ರೀತಿಯಲ್ಲಿ ಅಥವ ಪ್ರೀತಿಯಿಲ್ಲದೆ ಸತ್ಯದಲ್ಲಿ ಅಲ್ಲ. ತಪ್ಪುಗಳು ಮತ್ತು ಕಲಹಗಳು ಸಭೆಯನ್ನು ಹಾಳು ಮಾಡುತ್ತದೆ. ಸತ್ಯ ಮತ್ತು ಪ್ರೀತಿಯು ಅವರನ್ನು ಆತ್ಮೀಕವಾಗಿ ಜೀವಂತವಾಗಿಡುತ್ತದೆ ಮತ್ತು ಬೆಳೆಯುವಂತೆ ಮಾಡುತ್ತದೆ. **16**

**5:16** *"ನಡೆದುಕೊಳ್ಳಿರಿ"*– ಅಥವಾ "ಜೀವಿಸಿರಿ" ಅಥವಾ "ಮುಂದೆ ಹೋಗಿರಿ". 6:10 ರ ವರೆಗೂ ಇದು ಪೌಲನ ವಿಷಯವಾಗಿದೆ. "ಆತ್ಮನಿಂದ" ಎಂದು ಹೇಳುವಾಗ ಅವನ ಅರ್ಥ "ದೇವರ ಆತ್ಮ" ಕ್ರಿಸ್ತನಲ್ಲಿ ಆತ್ಮೀಕ ಜೀವಿತವನ್ನು ಜೀವಿಸಲು ಬೇಕಾದ ಶಕ್ತಿಯನ್ನು ಕೊಡುವವನೇ ಈತನು. ರೋಮಾ 8:4-14 ಹೋಲಿಸಿರಿ. ಪಾಪ ಸ್ವಭಾವವನ್ನು ಪೌಲನು ತಳ್ಳಿ ಹಾಕುವುದಿಲ್ಲ. ("ಶರೀರ" – ವ.13) ಮತ್ತು ಅದರ ಆಸೆಯು ವಿಶ್ವಾಸಿಗಳಲ್ಲಿದೆ. ಅವುಗಳು ಇರುವುದನ್ನು ಬಹಳ ಸರಳವಾಗಿ ಸೂಚಿಸುತ್ತಾನೆ. ಮುಂದಿನ ವಚನಗಳಲ್ಲಿ ಇದು ಇನ್ನೂ ಸ್ಪಷ್ಟವಾಗಿದೆ. ರೋಮಾ 7:14-25; 1 ಯೋಹಾನ 1:8 ಸಹ ನೋಡಿರಿ. ಶರೀರ ಮತ್ತು ಅದರ ಆಸೆಯು ನಮ್ಮೆಲ್ಲರಲ್ಲಿಯೂ ಇದೆ ಆದರೆ ದೇವರಾತ್ಮನಿಂದ ಅದನ್ನು ಹತೋಟಿಗೆ ತಂದು ಜೈಸಬಹುದಾಗಿದೆ. **17**

**5:17** ದೇವರ ಆತ್ಮನು ಮತ್ತು ಶರೀರ (ಮನುಷ್ಯನ ಬಿದ್ದುಹೋದ, ಪಾಪ ಸ್ವಭಾವ) ಇವುಗಳಲ್ಲಿ ಯಾವುದೂ ಸಾಮಾನ್ಯವಾದದ್ದು ಇಲ್ಲ. ಅವುಗಳಿಗೆ ಬೇರೆ ಆಸೆಗಳಿವೆ, ಬೇರೆ ಯೋಚನೆಗಳಿವೆ, ಬೇರೆ ಗುರಿ (ರೋಮಾ 8:5-8). ನಮ್ಮ ಜೀವಿತ ಈ ಲೋಕದಲ್ಲಿ ಮುಗಿಯುವವರೆಗೂ ಅವು ಒಂದಕ್ಕೊಂದು ಯುದ್ದ ಮಾಡುತ್ತಿರುತ್ತವೆ. ಶರೀರ – ನಾವು ಸ್ವಾಭಾವಿಕವಾಗಿ ಯಾರಾಗಿದ್ದವೋ ಅದನ್ನು ನಮ್ಮ ತಂದೆತಾಯಿಗಳಿಂದ ಪಡೆದುಕೊಂಡೆವು – ನಾವು ಇದನ್ನು ಬಿಟ್ಟುಕೊಡುವುದಿಲ್ಲ, ನಾವು ತಪ್ಪು ಕಾರ್ಯಗಳನ್ನು ಆಶಿಸುದನ್ನು ಬಿಡುವುದಿಲ್ಲ, ನಾವು ಒಳ್ಳೆಯವರು ಮತ್ತು ಪರಿಶುದ್ಧರಾಗುವುದಿಲ್ಲ. ನೋಡುವುದಾದರೆ ಕಾಲ ಕಳೆದಂತೆಲ್ಲಾ ಇನ್ನೂ ಕೆಟ್ಟದ್ದಾಗಿಯೇ ಆಗುತ್ತದೆ (ಎಫೆ 4:22). ಮತ್ತು ದೇವರ ಆತ್ಮನು ಶರೀರವನ್ನು ಪ್ರತಿಯೊಂದು ಹೆಜ್ಜೆಯಲ್ಲಿಯೂ ವಿರೋಧಿಸುತ್ತಾನೆ, ಮತ್ತು ಅದರ ಯಾವದೇ ಒಂದು ಬೇಡಿಕೆಗೆ ತನ್ನನ್ನು ಒಪ್ಪಿಸಿಕೊಡುವುದಿಲ್ಲ. "ನೀವು ಮಾಡಲಿಚ್ಛಿಸುವುದನ್ನು ಮಾಡಲಾರಿರಿ" ಎಂದು ಪೌಲನು ಹೇಳುವಾಗ ಅದರ ಅರ್ಥವೇನು? ಇದರ ಅರ್ಥವೇನೆಂದರೆ ವಿಶ್ವಾಸಿಗಳು ಯಾವಾಗಲೂ ಒಳ್ಳೆಯದನ್ನು ಮಾಡುವುದಿಲ್ಲ ಯಾಕಂದರೆ ಅವರ ಪಾಪ ಸ್ವಭಾವವು ಅವರನ್ನು ತಡೆಯುತ್ತದೆ (ರೋಮಾ 7:15,18,20 ನೋಡಿರಿ). ಅಥವಾ ಬಹುಶಃ ಅವರು ತಮ್ಮ ಪಾಪ ಸ್ವಭಾವದ ಆಸೆಯನ್ನು ಪೂರೈಸಲು ಸಾಧ್ಯವಿಲ್ಲ ಯಾಕಂದರೆ ಅವರೊಳಗಿರುವ ಪವಿತ್ರಾತ್ಮನು ಅವರ ಆಸೆಗಳನ್ನು ವಿರೋಧಿಸುತ್ತಾನೆ. ಒಂದು ವಿಧದಲ್ಲಿ ಇವೆರಡು ಕಾರ್ಯಗಳು ಸತ್ಯವಾಗಿದೆ, ಮತ್ತು ಇವೆರಡು ಸಹ ವಿಶ್ವಾಸಿಗಳಲ್ಲಿ ಪಾಪ ಸ್ವಭಾವವು ಇರುವುದನ್ನು ತೋರಿಸುತ್ತದೆ. ಮತ್ತು ಇದನ್ನು ಎಚ್ಚರಿಕೆಯಿಂದ ಗಮನಿಸಿ ಪೌಲನು ಗಲಾತ್ಯದವರಿಗೆ ಜಯದ ಮಾರ್ಗವು ಅವರ ಪಾಪಸ್ವ

ಭಾವವನ್ನು ಈ ಭೂಮಿಯಲ್ಲಿ ನಿರ್ಮೂಲ ಮಾಡುವುದರಲ್ಲಿದೆ ಎಂದು ಬೋಧಿಸುತ್ತಿಲ್ಲ. ಅವನ ಯಾವುದೇ ಪತ್ರಿಕೆಗಳಲ್ಲಿ ಇದರ ವಿಷಯವಾಗಿ ಯಾವುದೇ ನಿರೀಕ್ಷೆಯನ್ನು ಕೊಡುವುದಿಲ್ಲ (ಮತ್ತು ಸತ್ಯವೇದದಲ್ಲಿ ಇದು ಎಲ್ಲಿಯೂ ಕಾಣುವುದಿಲ್ಲ). ಆದರೆ, ಇದಕ್ಕಿಂತಲೂ ಅವನು ಬೇರೆಯದನ್ನೇ ಬೋಧಿಸುತ್ತಾನೆ. ಜಯದ ಮಾರ್ಗವು, ದೇವರ ಆತ್ಮನಿಂದ ಜೀವಿಸುವುದು ಎಂದು ಪೌಲನು ಹೇಳುತ್ತಾನೆ (ವ.16). **18**

**5:18** *"ಆತ್ಮನಿಂದ ನಡಿಸಿಕೊಳ್ಳುವುದು"*– ರೋಮಾ 8:14 ನೋಡಿರಿ. ದೇವರ ಆತ್ಮನು ವಿಶ್ವಾಸಿಗಳನ್ನು ಧಾರ್ಮಿಕ ಬಂಧನದಿಂದ ಬಿಡುಗಡೆ ಮಾಡಿದೆ, ಸ್ವ-ಪ್ರಯತ್ನದಿಂದ ರಕ್ಷಣೆಯನ್ನು ಪಡೆಯಬಹುದೆಂಬ ತತ್ವಗಳಿಂದ ದೂರಮಾಡಿದೆ. ಅವನು ಅವರನ್ನು ತಿರುಗಿ ಆ ರೀತಿಯ ಕಾರ್ಯಗಳಿಗೆ ನಡೆಸುವುದಿಲ್ಲ.

*"ನೇಮ ನಿಷ್ಠೆಗಳಿಗೆ ಅಧೀನರಲ್ಲ"*– ರೋಮಾ 6:14. ಆಸೆಯನ್ನು ಮತ್ತು ಶರೀರದ ಸ್ವಭಾವವನ್ನು ನಿಗ್ರಹಿಸಲು ನಿಯಮ ಮತ್ತು ಕಾಯಿದೆಗಳಿಂದ ಸಾಧ್ಯವೆಂದು ಜನರು ಸಾಧಾರಣವಾಗಿ ಯೋಚಿಸುತ್ತಾರೆ. ಆ ರೀತಿಯ ಕಾರ್ಯಗಳು ಪಾಪವನ್ನು ಮತ್ತು ಪಾಪದ ಆಸೆಯನ್ನು ಉತ್ತೇಜಿಸುತ್ತದೆಂದು ಪೌಲನು ಬಲ್ಲವನಾಗಿದ್ದನು (ರೋಮಾ 7:5,7-13 ನೋಡಿರಿ). ದೇವರ ಆತ್ಮನ ಮೂಲಕ ಜೀವಿಸುವುದಾರೆ ಮಾತ್ರ ಶರೀರವನ್ನು ಜೈಸಲು ಸಾಧ್ಯವೆಂದು ಅವನಿಗೆ ತಿಳಿದಿತ್ತು. **19-21**

**5:19-21** ನಾಚಿಕೆಗೇಡಿತನ ವಿಗ್ರಹಾರಾಧನೆ ಮತ್ತು ಸ್ವಾರ್ಥತೆ ಕುಡಿಕತನವನ್ನು ಮತ್ತು ಮತ್ಸರವನ್ನು ಪಕ್ಕ ಪಕ್ಕದಲ್ಲಿ ನಮೂದಿಸಿರುವುದನ್ನು ಗಮನಿಸಿ. ಈ ಕಾರ್ಯಗಳು ಪಾಪ ಸ್ವಭಾವದಿಂದ, ಬಿದ್ದು ಹೋದ ಮನುಷ್ಯನ ಹೃದಯದಿಂದ ಬರುತ್ತವೆಂದು ಆತ್ಮೀಕ ಮನುಷ್ಯರಿಗೆ ಇದು "ಸ್ಪಷ್ಟವಾಗಿದೆ" ಮತ್ತಾಯ 15:19; ಮಾರ್ಕ 7:21-23; ರೋಮಾ 1:29-32; 3:9-18 ಹೋಲಿಸಿರಿ. ಪಾಪ ಸ್ವಭಾದ ಎಲ್ಲಾ ಕಾರ್ಯಗಳನ್ನು ಇಲ್ಲಿ ಉಲ್ಲೇಖಿಸಿಲ್ಲ. ಇವು ಬರಿ ಉದಾಹರಣೆಯಾಗಿದೆ. ಇವುಗಳಲ್ಲಿ ಕೆಲವು ದೇವರಿಗೆ ನೇರವಾಗಿ ವಿರುದ್ಧವಾಗಿವೆ, ಕೆಲವು ಮತ್ತೊಬ್ಬ ಮನುಷ್ಯರೊಂದಿಗೆ, ಕೆಲವು ಆ ಕಾರ್ಯಗಳನ್ನು ಮಾಡುವವರ ವಿರುದ್ಧವಾಗಿಯೇ ಇವೆ. ಅವೆಲ್ಲವೂ ನಾಶಮಾಡುವಂಥದ್ದು ಮತ್ತು ದೇವರ ಕೋಪಕ್ಕೂ ಮತ್ತು ನ್ಯಾಯತೀರ್ಪಿಗೂ ಅರ್ಹವಾಗಿವೆ. **20**

**5:20** *"ವಿಗ್ರಹಾರಾಧನೆ"*– ವಿಮೋ 20:3-6; ಮುಂತಾದವುಗಳು.

*"ಮಾಟ"*– ಧರ್ಮೋ 18:9-12 ಮುಂತಾದವುಗಳು. **21**

**5:21** *"ನಡಿಸು"*– ಅಭ್ಯಾಸ ಮಾಡು.

*"ಭಿನ್ನಮತ"*, *"ಕಕ್ಷಬೇಧ"*– 1:6,7; 1 ಕೊರಿಂಥ 3:3,4. "ಮತ್ಸರ" – ಜ್ಞಾನೋ 14:30; 27:4; ಮತ್ತಾಯ 27:18; ಅಪೊ 17:5; ಯಾಕೋಬ 3:14,16.

*"ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ"*– 6:7,8; 1 ಕೊರಿಂಥ 6:9,10; ಎಫೆ 5:5,6;

ಪ್ರಕ 21:8. ಈ ರೀತಿಯ ವಾಕ್ಯಗಳಿದ್ದರೂ ಸಹ ಕ್ರೈಸ್ತರೆನಿಸಿಕೊಳ್ಳುವ ಕೆಲವರು ಪಾಪ ಮಾಡಲು ತಮ್ಮನ್ನು ಮನವೊಲಿಸಿಕೊಂಡು ಅವರು ಇಷ್ಟಬಂದಂತೆ ಪಾಪವನ್ನು ಮಾಡಬಹುದೆಂದು ಮತ್ತು ಮಾಡಿ ತಪ್ಪಿಸಿಕೊಳ್ಳಬಹುದೆಂದು ತಿಳಿದುಕೊಂಡಿದ್ದಾರೆ. ಅವರು ತಮ್ಮನ್ನೇ ಮೋಸ ಪಡಿಸಿಕೊಳ್ಳುತ್ತಿದ್ದಾರೆ ಮತ್ತು ನಮ್ಮನ್ನೂ ಸಹ ಮೋಸಗೊಳಿಸುತ್ತಾರೆ. "ದೇವರ ರಾಜ್ಯ" ಟಿಪ್ಪಣಿಯನ್ನು ಮತ್ತಾಯ 4:17 ನೋಡಿರಿ. **22,23**

**5:22,23** ಇವುಗಳು ವಿಶ್ವಾಸಿಯ ಆತ್ಮದ ಫಲವಲ್ಲ ಆದರೆ ದೇವರಾತ್ಮನಿಂದ ವಿಶ್ವಾಸಿಗಳಲ್ಲಿ ಉಂಟಾದ ಫಲಗಳು. ಇವುಗಳು ಸ್ವ-ಪ್ರಯತ್ನದ ಫಲವಲ್ಲ. ಆದರೆ ಇದರ ಅರ್ಥ ವಿಶ್ವಾಸಿಯು ನಿಷ್ಕ್ರಿಯವಾಗಿ ಇದ್ದು ಏನೂ ಮಾಡಬಾರದೆಂದಲ್ಲ. ಅವನು ಆತ್ಮನಲ್ಲಿ ಜೀವಿಸಬೇಕು ಮತ್ತು ಆತ್ಮನ ನಡಿಸುವಿಕೆಯನ್ನು ಹಿಂಬಾಲಿಸಬೇಕು. ಇಲ್ಲದಿದ್ದರೆ ಅವನ ಫಲವು ಅವನ ಜೀವಿತದಲ್ಲಿ ಕಾಣುವುದಿಲ್ಲ. "ಫಲ" ಎಂಬ ಪದವು ಬೆಳವಣಿಗೆಯನ್ನು ಸೂಚಿಸುತ್ತದೆ. ಮತ್ತಾಯ 13:23 ಹೋಲಿಸಿರಿ. ಸ್ವಾಭಾವಿಕವಾಗಿ ಒಂದು ಫಲವು ಕಾಣಿಸಿಕೊಳ್ಳಬೇಕಾದರೆ ಮೊದಲು ಒಂದು ಬೀಜವಿರಬೇಕು, ನಂತರ ಆ ಗಿಡದ ಅಥವಾ ಮರದ ಬೆಳವಣಿಗೆ, ನಂತರ ಮೊಗ್ಗು ಮತ್ತು ಹೂ ಮತ್ತು ನಂತರ ಹಣ್ಣು. ಆತ್ಮೀಕ ಫಲವು ಸಹ ಅದರಂತೆಯೇ. ಕ್ರಿಸ್ತನನ್ನು ನಾವು ಮೊದಲು ಸ್ವೀಕರಿಸಿದಾಗ ಅನೇಕ ವೇಳೆ ನಮ್ಮ ಪ್ರೀತಿ, ಸಂತೋಷ ಮತ್ತು ಸಮಾಧಾನವು ನಮ್ಮ ಹೃದಯದಲ್ಲಿ ಉಕ್ಕಿಹರಿಯುತ್ತದೆ. ಆದರೆ ಇವುಗಳು ಅಭಿವೃದ್ಧಿ ಹೊಂದಿ ಪರಿಪೂರ್ಣತೆಗೆ ಬರಬೇಕು ಮತ್ತು ಅದಕ್ಕೆ ಇತರ ಆತ್ಮೀಕ ಗುಣಗಳನ್ನು ಅದಕ್ಕೆ ಸೇರಿಸಬೇಕು. ತಾಳ್ಮೆ, ನಂಬಿಗಸ್ತಿಕೆ ಮತ್ತು ಶಮೆದಮೆ ಇವುಗಳು ಕಾಲಕ್ರಮೇಣವಾಗಿ ಅಭಿವೃದ್ಧಿಯಾಗುತ್ತವೆ. 2 ಪೇತ್ರ 1:5-8 ಹೋಲಿಸಿರಿ. ಈ ಪಟ್ಟಿಯಲ್ಲಿರುವ ಎಲ್ಲಾ ಗುಣಗಳನ್ನು ತನ್ನ ಮಕ್ಕಳೆಲ್ಲರೂ ಪಡಕೊಳ್ಳಬೇಕೆಂದು ದೇವರು ಬಯಸುತ್ತಾನೆ, ಮತ್ತು ಆತನ ಆತ್ಮನ ಕೆಲಸದ ಮೂಲಕ ನಾವು ಹೊಂದಿಕೊಳ್ಳಬಹುದು. ಪೌಲನು ಪ್ರೀತಿಯನ್ನು ಮೊದಲು ಇಡುತ್ತಾನೆ. ಇದು ಎಲ್ಲಾ ಗುಣಗಳಿಗಿಂತ ಶ್ರೇಷ್ಠವಾದ ಗುಣವೆಂದು ಅವನಿಗೆ ತಿಳಿದಿತ್ತು (ವಚನಗಳು 6,14; 1 ಕೊರಿಂಥ 13:13). **22**

**5:22** *"ಸಂತೋಷ"*– ಯೋಹಾನ 15:11; 16:20-22; 17:13; ರೋಮಾ 5:11; 14:17; 15:13. ಈ ಲೋಕದ ಜನರು ಕೆಲವು ಸಾರಿ ಸಂತೋಷ ಪಡುವುದು ಹೊರಗಿನ ಸನ್ನಿವೇಶಗಳನ್ನು ಆಧರಿಸಿದೆ. ವಿಶ್ವಾಸಿಯ ಸಂತೋಷವು ಶಾಶ್ವತವಾದ ಸತ್ಯವಾಗಿದೆ.

*"ಸಮಾಧಾನ"*– ಲೂಕ 2:14; ಯೋಹಾನ 14:27; 16:33; ರೋಮಾ 1:7; 14:17; 15:13.

*"ಧೀರ್ಘಶಾಂತಿ"*– ಗ್ರೀಕ್ ಭಾಷೆಯಲ್ಲಿ ಇದು ಎರಡು ಅರ್ಥಗಳಿರುವ ಒಂದೇ ಪದ. ರೋಮಾ 5:3; ಕೊಲೊ 1:11; ಇಬ್ರಿ 6:12; 10:36; 12:1; ಯಾಕೋಬ 1:3,4.

*"ದಯೆ"*– ( "ಸೌಮ್ಯತೆ" ಎನ್ನುವ ಗ್ರೀಕ್ ಪದದ ಭಾಷಾಂತರಕ್ಕಿಂತಲೂ ಉತ್ತಮವಾದ

ಪದ) 2 ಕೊರಿಂಥ 6:6; ಎಫೆ 2:7; ತೀತ 3:4.

*"ಒಳ್ಳೆತನ"*– ರೋಮಾ 15:14; ಎಫೆ 5:9.

*"ನಂಬಿಕೆ" ಅಥವಾ "ನಂಬಿಗಸ್ತಿಕೆ"*– ಮತ್ತಾಯ 24:45; 25:21; 1 ಕೊರಿಂಥ 4:2; 7:25; ಪ್ರಕ 2:10; 17:14. **23**

**5:23** *"ಸಾಧುತ್ವ" ಅಥವಾ "ಸೌಮ್ಯತೆ"*– ಮತ್ತಾಯ 11:29; 2 ಕೊರಿಂಥ 10:1; 1 ಥೆಸ 2:7.

*"ಶಮೆದಮೆ"*– 2 ತಿಮೊ 1:7; 1 ಕೊರಿಂಥ 9:25,27; 2 ಪೇತ್ರ 1:6. ಈ ಎಲ್ಲಾ ಗುಣಗಳು ದೇವರಾತ್ಮನಿಂದ ಕೊಡಲ್ಪಟ್ಟಿದೆ ಇದನ್ನು ನಾವು ಅಳವಡಿಸಿಕೊಂಡು ನಮ್ಮ ಪ್ರತಿ ದಿನದ ಜೀವಿತದಲ್ಲಿ ಜೀವಿಸಬೇಕು. ನಮ್ಮಲ್ಲಿ ಅವುಗಳ ಬೆಳವಣಿಗೆಯನ್ನು ಕುಂಠಿತಗೊಳಿಸಬಹುದು ಅಥವಾ ಬೆಳೆಯಲು ಬಿಡಬಹುದು. **24**

**5:24** ಇದು ಎಲ್ಲ ವಿಶ್ವಾಸಿಗಳಲ್ಲಿಯೂ ನಿಜವಾಗಿದೆ, ಕ್ರಿಸ್ತನಲ್ಲಿರುವವರೆಲ್ಲರಿಗೆ, ಮತ್ತು ಕೆಲವು ಅಸಾಧಾರಣ ಸಂತರಿಗೆ ಮಾತ್ರವಲ್ಲ. 2:20 ರಲ್ಲಿ ಕ್ರಿಸ್ತನೊಂದಿಗೆ ವಿಶ್ವಾಸಿಗಳು ಕ್ರೂಜೆಗೆ ಹಾಕಲ್ಪಡುವುದರ ಬಗ್ಗೆ ಮಾತನಾಡುತ್ತಾನೆ. ಒಬ್ಬ ವಿಶ್ವಾಸಿಯು ತಾನೇ ಮಾಡಿದ್ದನ್ನು ಇಲ್ಲಿ ಮಾತಾಡುತ್ತಿದ್ದಾನೆ, ಆದರೆ ಅವರು ಅದನ್ನು ಮಾಡಿದ್ದಾರೆ. ವಿಶ್ವಾಸಿಗಳು ಇದನ್ನು ಅವರು ಮೊದಲು ಪಶ್ಚಾತ್ತಾಪ ಪಟ್ಟಾಗ ಮತ್ತು ಕ್ರಿಸ್ತನನ್ನು ನಂಬಿದಾಗ ಮಾಡಿದರು. ಪಶ್ಚಾತ್ತಾಪ ಸೂಚಿಸುವುದೇನೆಂದರೆ ಪಾಪ ಸ್ವಭಾವದ ಅಧೀನದಲ್ಲಿದ್ದ ಹಳೆಯ ಜೀವಿತದ ಮಾರ್ಗವನ್ನು ಸಂಪೂರ್ಣವಾಗಿ ಬಿಟ್ಟುಬಿಡುವುದು. ಕ್ರಿಸ್ತನಲ್ಲಿ ನಂಬಿಕೆ ಇಡುವುದೆಂದರೆ ತನ್ನ ಸ್ಥಳದಲ್ಲಿ ಕ್ರಿಸ್ತನು ಸತ್ತನೆಂದು ಸ್ವೀಕರಿಸುವುದು. ಬೇರೆ ರೀತಿಯಲ್ಲಿ ಹೇಳುವುದಾದರೆ, ಪಶ್ಚಾತ್ತಾಪ ಪಟ್ಟ ಅವರ ನಡತೆ ಮತ್ತು ಕ್ರಿಸ್ತನನ್ನು ನಂಬುವುದರ ಮೂಲಕ ಅವರು ಹೀಗೆ ಹೇಳುತ್ತಿದ್ದಾರೆ (ಪ್ರಾರಂಭದಲ್ಲಿ ಇದರ ವಿಷಯವು ಅವರಿಗೆ ಅರ್ಥವಾಗದಿರಬಹುದು) "ಕ್ರೂಜಿಸಲ್ಪಡಬೇಕಾದದ್ದು ನನ್ನನ್ನು, ಕ್ರಿಸ್ತನನ್ನಲ್ಲ" ತಮ್ಮ ಪಾಪ ಸ್ವಭಾವಕ್ಕೆ ತಕ್ಕ ಸ್ಥಳವು ಕ್ರೂಜೆಯ ಕಂಬವಾಗಿದೆಯೆಂದು ಅವರು ಒಪ್ಪಿಕೊಳ್ಳುತ್ತಿದ್ದಾರೆ. ಇದರ ವಿಷಯವಾಗಿ ದೇವರ ತೀರ್ಪನ್ನು ಅವರು ಒಪ್ಪಿಕೊಳ್ಳುತ್ತಾರೆ. ಮತ್ತು ಅವರು ತಮ್ಮನ್ನು ನಿರಾಕರಿಸಿಕೊಂಡು ತಮ್ಮ ಶಿಲುಬೆಯನ್ನು ಹೊತ್ತುಕೊಂಡು ಕ್ರಿಸ್ತನನ್ನು ಹಿಂಬಾಲಿಸುತ್ತಾರೆ (ಮತ್ತಾಯ 10:38,39; 16:24-26 ಅಲ್ಲಿಯ ಟಿಪ್ಪಣಿಯನ್ನು ನೋಡಿರಿ). ಜನರು ಇದನ್ನು ಮಾಡಲು ಒಪ್ಪದಿದ್ದರೆ ಅವರು ನಿಜವಾದ ಕ್ರೈಸ್ತರೆಂದು ಒಪ್ಪಿಕೊಳ್ಳುವುದರಲ್ಲಿ ಅರ್ಥವಿಲ್ಲ. ನಿಜವಾದ ವಿಶ್ವಾಸಿಗಳು ಯಾರೆಂದು ಇಲ್ಲಿ ಪೌಲನು ವಿವರಿಸುತ್ತಿದ್ದಾನೆ. ಅವರು "ಕ್ರೂಜಿಸಲ್ಪಡದಿದ್ದರೆ" ಅವರ ಪಾಪ ಸ್ವಭಾವವು ಇನ್ನೂ ಅವರಲ್ಲಿ ಇರುವುದರಿಂದ ಅವರು ಕ್ರಿಸ್ತನಿಗೆ ಸೇರಿದವರಲ್ಲ. ಆದಾಗ್ಯೂ, ವ.16 ರಿಂದ ಇರುವ ಈ ಭಾಗವು ವಿಶ್ವಾಸಿಗಳಿಗೆ ಪಾಪದ ಸ್ವಭಾವದಿಂದ ಅವರಿಗೆ ಇನ್ನು

ಯಾವ ಕಷ್ಟ ಇರುವುದಿಲ್ಲವೆಂಬ ಯೋಚನೆಗೆ ನಮ್ಮನ್ನು ನಡೆಸುವದಿಲ್ಲ. ಇದಕ್ಕೆ ತದ್ವಿರುದ್ದವಾಗಿರುತ್ತದೆಂದು ಪೌಲನು ಬಹಳ ಸರಳವಾಗಿ ತೋರಿಸಿಕೊಟ್ಟಿದ್ದಾನೆ. ವಿಶ್ವಾಸಿಗಳು, ಅವರ ವರ್ತನೆಯ ಮೂಲಕ ದೇವರು ಮತ್ತು ಪಾಪವನ್ನು ತೋರಿಸುವವರಾಗಿದ್ದಾರೆ, ಪಾಪ ಸ್ವಭಾವವು ಕ್ರೂಜಿಸಲ್ಪಟ್ಟಿದೆ, ಮತ್ತು ತಮ್ಮ ಸ್ಥಳದಲ್ಲಿ ಕ್ರೂಜಿಸಲ್ಪಟ್ಟ ಕ್ರಿಸ್ತನೊಂದಿಗೆ ಐಕ್ಯವಾಗಿದ್ದಾರೆ (ರೋಮಾ 6:4-7). ಆದರೆ ಪಾಪ ಸ್ವಭಾವವು ಇನ್ನು ಸತ್ತಿಲ್ಲ ಮತ್ತು ವಿಶ್ವಾಸಿಗಳಲ್ಲಿ ಹೂತುಹಾಕಲ್ಪಟ್ಟದೆ. ಮತ್ತು ಅದು ತನ್ನ ಸ್ವಂತ ಮಾರ್ಗವನ್ನು ವಿಶ್ವಾಸಿಗಳ ಜೀವಿತದಲ್ಲಿ ಕಂಡುಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿರುತ್ತದೆ (ವ.17). ಆದ್ದರಿಂದ ನಾವು ನಮ್ಮ ಶಿಲುಬೆಯನ್ನು ಹೊರಬೇಕೆಂದು ಕ್ರಿಸ್ತನು ಹೇಳುತ್ತಾನೆ. "ಪ್ರತಿದಿನ"– ಲೂಕ 9:23. "ಶರೀರಭಾವವನ್ನು ಶಿಲುಬೆಗೆ ಹಾಕುವುದು" ಪಾಪ ಸ್ವಭಾದ ಮತ್ತು ಕ್ರಿಸ್ತನ ಶಿಲುಬೆಯ ಕಡೆಗೆ ವಿಶ್ವಾಸಿಗಳ ವರ್ತನೆಯ ಬಗ್ಗೆ ಮಾತನಾಡುತ್ತದೆ. **25**

**5:25** ದೇವರ ಆತ್ಮನು ವಿಶ್ವಾಸಿಗಳೆಲ್ಲರಿಗೆ ಆತ್ಮೀಕ ಜೀವನವನ್ನು ಕೊಟ್ಟಿದ್ದಾನೆ (ಯೋಹಾನ 3:3-8). ಇದು ಸತ್ಯವಾಗಿರುವುದರಿಂದ ಆತ್ಮನನ್ನು ಹಿಂಬಾಲಿಸಬೇಕು ಮತ್ತು ಆತನೊಂದಿಗೆ ಹೆಜ್ಜೆ ಇಡುತ್ತಾ ನಡೆಯಬೇಕು. ಪಾಪ ಸ್ವಭಾವವನ್ನು ಜೈಸಲು ಇರುವ ಒಂದೇ ಮಾರ್ಗವಾಗಿದೆ, ಅದು ಎಲ್ಲಿರಬೇಕೋ ಅದನ್ನು ಅಲ್ಲಿಡಲು ಇರುವ ಒಂದೇ ಮಾರ್ಗವಾಗಿದೆ – ಶಿಲುಬೆಯ ಮೇಲೆ. **26**

**5:26** ಪ್ರಾಯೋಗಿಕ ವಿಷಯಗಳ ಕುರಿತಾಗಿ ದೇವರಾತ್ಮನೊಂದಿಗೆ ಹೆಜ್ಜೆಯನ್ನಿಡುವುದರ ವಿಷಯವಾಗಿ ಪೌಲನು ಇಲ್ಲಿ ಮಾತನಾಡುತ್ತಿದ್ದಾನೆ. ಆತನ ಆತ್ಮವು ಅಹಂಕಾರ, ಕಲಹ ಮತ್ತು ಹೊಟ್ಟೆಕಿಚ್ಚು ಇವುಗಳನ್ನು ವಿರೋಧಿಸುತ್ತದೆ ಮತ್ತು ಆದ್ದರಿಂದ ನಾವು ಆತನೊಂದಿಗೆ ನಡೆಯಬೇಕು. ಅವು ಶರೀರದ ಕರ್ಮಗಳಾಗಿವೆ.

# 6 1

**6:1** *"ಶಾಂತಭಾವದ ಆತ್ಮ"*– 5:23; 2 ತಿಮೊ 2:24,25. ಪಾಪದಲ್ಲಿ ಬಿದ್ದವರ ಬಗ್ಗೆ ಕಠಿಣವಾಗಿ ವರ್ತಿಸುವುದು, ಪ್ರೀತಿಸದಿರುವುದು, ಖಂಡಿಸುವುದು ಇದು ಅವರನ್ನು ಪಶ್ಚಾತ್ತಾಪಕ್ಕೆ ನಡೆಸುವ ಮಾರ್ಗವಲ್ಲ. ಲೂಕ 22:60-62; ಮಾರ್ಕ 16:7; ಯೋಹಾನ 21:15 ಹೋಲಿಸಿರಿ.

*"ಶೋಧಿಸಲ್ಪಡುವುದು"*– ಆತ್ಮೀಕರಾದವರು ಸಹ ತಮಗೆ ಶೋಧನೆಯಾಗುವುದಿಲ್ಲ ಮತ್ತು ಪಾಪದಲ್ಲಿ ಬೀಳುವುದಿಲ್ಲ ಎಂದು ನೆನೆಸಬಾರದು (1 ಕೊರಿಂಥ 10:12). **2**

**6:2** ವಿಶ್ವಾಸಿಗಳು ಮೋಶೆಯ ಧರ್ಮಶಾಸ್ತ್ರದ ಅಧೀನದಲ್ಲಿ ಇಲ್ಲ (3:25; 5:1). ಆದರೆ ಅವರು ಕ್ರಿಸ್ತನ ನಿಯಮದ ಅಧೀನದಲ್ಲಿದ್ದಾರೆ. ಇದು ಪ್ರೀತಿಯ ನಿಯಮವಾಗಿದೆ (ಯೋಹಾನ

13:34). ನಾವು ಜೊತೆ ವಿಶ್ವಾಸಿಗಳನ್ನು ಪ್ರೀತಿಸಿದರೆ ಆಗ ನಾವು ಅವರ ಜೀವಿತದಲ್ಲಿ ಅವರು ಎದುರಿಸುವ ಎಲ್ಲಾ ಕಷ್ಟಗಳಲ್ಲಿ ಮತ್ತು ಅವರಿಗೆ ಭಾರವಾಗಿರುವ ಕಾರ್ಯಗಳಲ್ಲಿ ಅವರಿಗೆ ಸಹಾಯ ಮಾಡಲು ಬಯಸುತ್ತೇವೆ. **3**

**6:3** ವ.2 ನೆರವೇರಿಸಲು ಇರುವ ಒಂದು ದೊಡ್ಡ ಅಡಚಣೆ ಯಾವುದೆಂದರೆ ಅಹಂಕಾರ (5:26). ಬೇರೆಯವರಿಗೆ ನಾವು ಸಹಾಯಕರಾಗಿರಬೇಕಾದರೆ ನಮ್ಮ ಅಸ್ಥಿತ್ವದ ಬಗ್ಗೆ ನಾವು ಸರಿಯಾದ ಮನೋಭಾವನೆಯನ್ನು ಹೊಂದಿರಬೇಕು. ಸರಿಯಾದ ಮನೋಭಾವನೆಯು ಲೂಕ 17:10; ರೋಮಾ 12:16; 1 ಕೊರಿಂಥ 3:5-7; ಫಿಲಿಪ್ಪಿ 2:3 ರಲ್ಲಿ ಕಾಣಬಹುದು. **4**

**6:4** 2 ಕೊರಿಂಥ 10:12-18 ನೋಡಿರಿ. ನಾವು ಮತ್ತೊಬ್ಬ ವಿಶ್ವಾಸಿಗಳಿಗಿಂತ ಹೆಚ್ಚಿನವರೆಂದು ನಾವು ಯೋಚಿಸಿದರೆ ಅಥವಾ ನಮ್ಮ ಸೇವೆಯು ಅವರ ಸೇವೆಗಿಂತಲೂ ಶ್ರೇಷ್ಟವೆಂದುಕೊಂಡರೆ, ಇದು ಅಹಂಕಾರವನ್ನು ಪ್ರೋತ್ಸಾಹಿಸುತ್ತದೆ ಮತ್ತು ವ.2 ನ್ನು ನೆರವೇರೆಸಲು ಅಡಚಣೆಯಾಗುತ್ತೀರಿ. **5**

**6:5** ಪ್ರತಿಯೊಬ್ಬ ವ್ಯಕ್ತಿಗೂ ಅವನದೇ ಆದ ಕೆಲಸವಿರುತ್ತದೆ ಮತ್ತು ಅವುಗಳ ವಿಷಯಗಳಲ್ಲಿ ಮಾತ್ರ ಅವನು ದೇವರಿಗೆ ಜವಾಬ್ದಾರಿಯುಳ್ಳವನಾಗಿರುತ್ತಾನೆ, ಬೇರೆಯವರಿಗಲ್ಲ (ಯೋಹಾನ 21:21,22; ರೋಮಾ 14:12). **6**

- **6:6** 1 ಕೊರಿಂಥ 9:9-14; ರೋಮಾ 15:26,27; 1 ತಿಮೊ 5:17,18. **7**

**6:7** ಸತ್ಯವೇದದ ಉದ್ದಕ್ಕೂ ಈ ಸತ್ಯವು ಕಾಣಿಸುತ್ತದೆ – ಯಾಜಕ 26:3-17; ಧರ್ಮೋ 30:15-18; ಹೋಶೇಯ 8:7; 10:12; ಜ್ಞಾನೋ 22:8; ಕೀರ್ತನೆ 18:25-27; ಯೋಬ 4:8; 2 ಕೊರಿಂಥ 9:6. **8**

**6:8** ಜೀವಿಸಲು ಎರಡು ಸಾಧ್ಯವಾದ ಮಾರ್ಗಗಳಿವೆ: ತಮ್ಮನ್ನು ಸಂತೋಷ ಪಡಿಸಿಕೊಳ್ಳುವುದು ("ಶರೀರ"), ಅಥವಾ ದೇವರಾತ್ಮನನ್ನು ಸಂತೋಷ ಪಡಿಸುವುದು. ಒಂದು ಮಾರ್ಗವು ನಾಶನದಲ್ಲಿ ಮುಕ್ತಾಯವಾಗುತ್ತದೆ ಅದು ಆಗಲೇ ಬೇಕು. ಇನ್ನೊಂದು ಮಾರ್ಗವು ನಿತ್ಯಜೀವ ಹೊಂದಿಕೊಳ್ಳುವುದರಲ್ಲಿ ಕೊನೆಗೊಳ್ಳುತ್ತದೆ (5:19-21; ರೋಮಾ 2:5-11; 8:5,6,12-14). ವಿಶ್ವಾಸಿಗಳು ತಮ್ಮ ಶರೀರವನ್ನು ಶಿಲುಬೆಗೆ ಹಾಕಿದ್ದಾರೆಂದು ಪೌಲನು ಈಗಾಗಲೇ ಹೇಳಿದ್ದಾನೆ (5:24). ಆದ್ದರಿಂದ ಯಾವನಾದರು ತನ್ನ ಪಾಪಸ್ವಭಾವವನ್ನು ತನ್ನ ಜೀವಿತದಲ್ಲಿ ಹೆಚ್ಚಿಸಿಕೊಳ್ಳುವುದಾದರೆ ಅವನು ಕ್ರಿಸ್ತನಲ್ಲಿ ನಿಜವಾದ ವಿಶ್ವಾಸಿಯಲ್ಲ (ಪ್ರತಿಯೊಬ್ಬ ನಿಜ ವಿಶ್ವಾಸಿಗಳು ಸಹ ಈ ರೀತಿಯ ತಪ್ಪಿನಲ್ಲಿ ಕೆಲವೊಮ್ಮೆ ಬೀಳಲು ಸಾಧ್ಯವಿದೆ) ಆದರೆ ನಿತ್ಯಜೀವವು ಏನೋ ಒಂದು ಫಲವನ್ನು ಕೊಯ್ಯುವ ಕಾರ್ಯವೋ? ಅದು ಒಂದು ಬಹುಮಾನವೆಂದು ಪೌಲನಿಗೆ ತಿಳಿದಿತ್ತು (ರೋಮಾ 6:23), ಆದರೆ ಇಲ್ಲಿ ಅವನು ಒಂದು ರೀತಿಯ ಜೀವಿತದ ನಂತರ ಬಾಧ್ಯತೆಯಾಗಿ ಹೊಂದಬಹುದಾದ ಕಾರ್ಯವೆಂದು ತೋರಿಸುತ್ತಿದ್ದಾನೆ (ರೋಮಾ 2:7-10 ಹೋಲಿಸಿರಿ). ಕ್ರಿಯೆಯ ಮೂಲಕ ರಕ್ಷಣೆ

ಸಿಕ್ಕುವುದೆಂದು ಅವನು ಬೋಧಿಸುತ್ತಿಲ್ಲ, ಆದರೆ ದೇವರಾತ್ಮನ ಮೂಲಕ ಪರಿವರ್ತನೆಗೊಳ್ಳುವ ಜೀವಿತವನ್ನು ಬೋಧಿಸುತ್ತಿದ್ದಾನೆ. ಲೋಕದಲ್ಲಿರುವ ಯಾರಂತೆಯೋ ವಿಶ್ವಾಸಿಗಳು ಇರುವುದಿಲ್ಲ. ಎಲ್ಲಾ ಜನರಲ್ಲಿ ಅವರು ಮಾತ್ರವೇ ಆತ್ಮನನ್ನು ಬಿತ್ತುತ್ತಾರೆ. **9**

**6:9** "ಒಳ್ಳೆಯದನ್ನು ಮಾಡುವುದು" ಇದು ಒಂದು ರೀತಿಯಲ್ಲಿ ವಿಶ್ವಾಸಿಗಳು ದೇವರಾತ್ಮನನ್ನು ಬಿತ್ತುವುದಾಗಿದೆ. ಮತ್ತು ಅವರಲ್ಲಿ ದೇವರಾತ್ಮನು ಇದ್ದಾನೆ ಎನ್ನುವುದಕ್ಕೆ ಸಾಕ್ಷಿಯಾಗಿದೆ (5:22). ವಿಶ್ವಾಸಿಗಳು ಅವರು ಮಾಡಿದ ಒಳ್ಳೆಯದಕ್ಕಾಗಿ ಪ್ರತಿಫಲವನ್ನು ಹೊಂದುವರು – ಮತ್ತಾಯ 5:12; 10:42; 25:21; 1 ಕೊರಿಂಥ 3:14; 15:58; ಪ್ರಕ 22:12. ಈ ರೀತಿಯಾಗಿ ಈ ಲೋಕದಲ್ಲಿ ಒಳ್ಳೆಯದನ್ನು ಮಾಡಬಯಸಿದವರಿಗೆ ಅನೇಕ ಅವಕಾಶಗಳು ದೊರೆಯುತ್ತದೆ, ಆದರೆ ಅನೇಕ ನಿರುತ್ಸಾಹಗಳನ್ನು ಸಹ ಸಂಧಿಸಬೇಕಾಗುತ್ತದೆ ಮತ್ತು ಅನೇಕ ಸಾರಿ ಬಿಟ್ಟುಬಿಡಬೇಕೆಂಬ ಶೋಧನೆ ಉಂಟಾಗುತ್ತದೆ. ಭವಿಷ್ಯದಲ್ಲಿ ದೊರಕುವ ಪ್ರತಿಫಲವನ್ನು ಯೋಚಿಸಿ ಒಳ್ಳೆಯದನ್ನು ಮಾಡಬೇಕೆಂದು ಪೌಲನು ಉತ್ಸಹ ಪಡಿಸುತ್ತಾನೆ. **10**

**6:10** *"ಎಲ್ಲ"*–ಅಂದರೆ ಎಲ್ಲರೂ – ನಮ್ಮ ವೈರಿಗಳು ಸಹ (ಮತ್ತಾಯ 5:43-48; ಲೂಕ 6:35; ರೋಮಾ 12:20,21). **11**

**6:11** *"ದೊಡ್ಡ ಅಕ್ಷರ"*– ಪೌಲನು ತನ್ನ ಕಣ್ಣುಗಳು ಸರಿಯಾಗಿ ಕಾಣದಿರುವದರಿಂದ ದೊಡ್ಡ ಅಕ್ಷರಗಳಲ್ಲಿ ಬರೆದನೋ? ಅಥವಾ ಮುಕ್ತಾಯದ ಈ ಭಾಗವು ಎದ್ದುಕಾಣಲೆಂದು ಅವನು ಹೀಗೆ ಮಾಡಿದ್ದಾನೋ? ಅಥವಾ ಮುಂದೆ ಮುಂದುವರಿಯುವದನ್ನು ಒತ್ತಿಹೇಳಲು ಹೀಗೆ ಮಾಡಿದನೋ? ನಮಗೆ ಗೊತ್ತಿಲ್ಲ. **12**

**6:12** ಅಲ್ಲಿದ್ದ ಸುಳ್ಳು ಬೋಧಕರು ಅವನನ್ನು ಮೆಚ್ಚಿಸಲು ಪ್ರಯತ್ನಿಸಿದರು. ಅವರ ಸಾಮರ್ಥ್ಯ ಮತ್ತು ಉತ್ಸಾಹದಿಂದ ಯೆಹೂದ್ಯರ ಮೇಲೆ ಪ್ರಭಾವಬೀರಲು ಪ್ರಯತ್ನಿಸಿದರು. ಅವರು "ಶಿಲುಬೆಯ ಆಕ್ಷೇಪಣೆಯನ್ನು" ಹೊತ್ತುಕೊಳ್ಳಲು ಇಚ್ಛಿಸಲಿಲ್ಲ (5:11). ಕೆಲವು ಕ್ರಿಸ್ತನ ಸೇವಕರೆನಿಸಿಕೊಳ್ಳುವವರು ಹಿಂಸೆಯನ್ನು ತಪ್ಪಿಸಿಕೊಳ್ಳಲು ಮತ್ತು ಪ್ರಸಿದ್ಧಿಹೊಂದಲು ಏನು ಬೇಕಾದರೂ ಮಾಡುತ್ತಾರೆ. 1:10 ಹೋಲಿಸಿರಿ. **13**

**6:13** *"ಕೈಕೊಳ್ಳಿರಿ"*– ರೋಮಾ 2:17-24, ಸುಳ್ಳು ಬೋಧಕರಲ್ಲಿ ಒಬ್ಬನಾದರೂ ಮೋಶೆಯ ಧರ್ಮಶಾಸ್ತ್ರವನ್ನು ಕೈಕೊಳ್ಳಲಿಲ್ಲ. "ಹೆಚ್ಚಳ ಪಡುವುದು" – ಅವರ ದೃಷ್ಟಿಯಲ್ಲಿ ಕೆಲವರನ್ನು ಪರಿವರ್ತಿಸಿದ್ದೇವೆಂದು ಹೆಚ್ಚಳ ಪಟ್ಟರು. **14**

**6:14** *"ಶಿಲುಬೆ"*– ಇದು ವಿಶ್ವಾಸಿಯು ಹಚ್ಚಳ ಪಡುವುದಕ್ಕೂಮತ್ತು ಮಹಿಮೆಯ ಅಸ್ತಿವಾರ. ಅದು ಅವನಲ್ಲಿಯಾಗಲೀ ಅಥವಾ ಅವನು ಮಾಡಿದ್ದರಿಂದಾಗಲೀ ಅಲ್ಲ, ಆದರೆ ಕ್ರಿಸ್ತನು ಪಾಪಿಗಳಿಗಾಗಿ ಮರಣಿಸಿದ್ದರಿಂದಲೇ. ರೋಮಾ 3:27; 1 ಕೊರಿಂಥ 1:29-31; ಎಫೆ

2:9. ಈ ವಿಷಯದಲ್ಲಿ ಪೌಲನನ್ನು ಹಿಂಬಾಲಿಸದೆ ಮತ್ತು ತಮ್ಮಲ್ಲಿ ಮತ್ತು ತಾವು ಮಾಡಿರುವ ಕಾರ್ಯಗಳ ವಿಷಯವಾಗಿ ಕೊಚ್ಚಿಕೊಳ್ಳುವವರ ವಿಷಯವಾಗಿ ನಾವು ಎಚ್ಚರಿಕೆಯಿಂದಿರಬೇಕು ಮತ್ತು ಒಬ್ಬ ಮನಷ್ಯನು ಯಾವುದರ ವಿಷಯವಾಗಿ ಕೊಚ್ಚಿಕೊಳ್ಳುತ್ತಾನೋ ಅದು ಅವನ ಗುಣವನ್ನು ತೋರಿಸುತ್ತದೆ.

*"ಶಿಲುಬೆಗೆ ಹಾಕಿಸಿಕೊಂಡಿದ್ದೇನೆ"*– ಗಲಾ 2:20; 5:24. "ಲೋಕ"ದೊಳಗಿಂದ ಎಂದು ಪೌಲನು ಹೇಳುವಾಗ "ಈ ಪ್ರಸ್ತುತ ದುಷ್ಟ ಲೋಕ" (ಗಲಾ 1:4). ಅವನು ಪಾಪದ ಈ ಲೋಕವನ್ನು ಸೂಚಿಸುತ್ತಾನೆ – ಒಬ್ಬ ಮನುಷ್ಯನು ಹುಡುಕುತ್ತಿರುವುದು ಮತ್ತು ಹೆಚ್ಚಳಪಡಬೇಕೆಂದಿರುವುದು. ಯೋಹಾನ 7:7; 17:14; ರೋಮಾ 12:2; 1 ಯೋಹಾನ 2:15-17. ಈ ಪಾಪದ ಲೋಕದಿಂದ ಪೌಲನಿಗೆ ಏನು ಬೇಕಾಗಿರಲಿಲ್ಲ. ಅವನು ಯೋಚಿಸುವ ಮಟ್ಟಿಗೆ ಅದು ಸತ್ತು ಹೋದದ್ದಾಗಿತ್ತು. ಮತ್ತು ಈ ಲೋಕದ ವಿಷಯದಲ್ಲಿ ಶಿಲುಬೆಗೆ ಹಾಕಲ್ಪಟ್ಟವನಾಗಿದ್ದನು. ಲೋಕವು ಅವನನ್ನು ಹುಚ್ಚನೆಂದು ಭಾವಿಸಿತ್ತು ಮತ್ತು ಅವನಿಂದ ಏನ್ನನ್ನೂ ಅಪೇಕ್ಷಿಸಲಿಲ್ಲ. ಲೋಕ ಮತ್ತು ಅವನ ನಡುವೆ ಒಂದು ದೊಡ್ಡ ಕ್ರಿಸ್ತನ ಮರಣದಿಂದ ಸ್ಥಾಪಿತವಾದ ಒಂದು ಕಣಿವೆ ಇತ್ತು. ಲೋಕವು ಕ್ರಿಸ್ತನನ್ನು ಶಿಲುಬೆಗೆ ಹಾಕಿತು – ಕ್ರಿಸ್ತನ ಕೊಲೆಗಾರರೊಂದಿಗೆ ಪೌಲನಿಗೇನು ಪಾಲು? ಗಲಾತ್ಯ ಪತ್ರಿಕೆಯಲ್ಲಿ ಪೌಲನು ವಿಶ್ವಾಸಿಯ ಸಂಬಂಧದೊಂದಿಗೆ "ಶಿಲುಬೆಗೆ ಹಾಕಲ್ಪಟ್ಟವನು" ಎಂದು ಉಪಯೋಗಿಸುವುದನ್ನು ನೋಡಿರಿ – ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡಿದ್ದೇನೆ (ಗಲಾ 2:20), ಶರೀರ ಭಾವವನ್ನು ಶಿಲುಬೆಗೆ ಹಾಕಿದೆ (5:24), ಲೋಕಕ್ಕಾಗಿ ಶಿಲುಬೆಗೆ ಹಾಕಿಸಿಕೊಂಡಿದ್ದೇನೆ (6:14). **15**

**6:15** *"ಹೊಸ ಸೃಷ್ಟಿ"*– 2 ಕೊರಿಂಥ 5:17. ಒಳಗಿನ ಮನುಷ್ಯನ ಬದಲಾವಣೆಯೇ ಮುಖ್ಯವಾದದ್ದಾಗಿದೆ, ಹೊಸ ಆತ್ಮೀಕ ಜೀವನ, ಆಚರಣೆ, ಸಮಾರಂಭ ಮತ್ತು ಯೆಹೂದ್ಯರು ಅನುಸರಿಸುತ್ತಿದ್ದ ಧಾರ್ಮಿಕ ನಿಯಮಗಳು ಅಲ್ಲ. ನಾವು ಹೊಸದಾಗಿ ಹುಟ್ಟಿದ್ದರೆ ಅವರು ಹಾಗಾಗದಂತೆ ನೋಡಿಕೊಳ್ಳಬೇಕು. **16**

**6:16** *"ಈ ಸೂತ್ರ"*– ವಚನಗಳು 14,15 ರಲ್ಲಿ ತತ್ವವನ್ನು ಅವನು ನಿರೂಪಿಸಿದ್ದಾನೆ.

*"ದೇವರ ಇಸ್ರಾಯೇಲ್ಯರಿಗೆ"*– NIV ಭಾಷಾಂತರದಲ್ಲಿ 1978 : "ಇಸ್ರಾಯೇಲ್ಯರ ದೇವರಿಗೂ ಸಹ" ಇದು ಅನಾವಶ್ಯಕ ಮತ್ತು ದಾರಿ ತಪ್ಪಿಸುವ ಸಾಧ್ಯತೆಯಿದೆ. ಇದರ ಗ್ರೀಕ್ ಪದವು "ಕ", ಸಾಧಾರಣವಾಗಿ ಇದನ್ನು ಹೊಸ ಒಡಂಬಡಿಕೆಯಲ್ಲಿ "ಮತ್ತು" ಎಂದು ಭಾಷಾಂತರ ಮಾಡಲಾಗಿದೆ. (KJV ಭಾಷಾಂತರದಲ್ಲಿ ಈ ಪದವನ್ನು "ಮತ್ತು" ಸಮಯಗಳು ಎಂದು ಭಾಷಾಂತರ ಮಾಡಲಾಗಿದೆ, ಮತ್ತು "ಸಹ" ಸಮಯಗಳು ಮಾತ್ರ). "ಇಸ್ರಾಯೇಲಿನ" ಎಂದು ಪೌಲನು ಹೇಳುವಾಗ ಸ್ವ-ಪ್ರಯತ್ನದ ಮಾರ್ಗವನ್ನು ತ್ಯಜಿಸಿ ಕ್ರಿಸ್ತನನ್ನು ನಂಬಿದ ಯೆಹೂದ್ಯರು. ಅವರು ನಿಜವಾದ ಇಸ್ರಾಯೇಲ್ಯರಾಗಿದ್ದರು. ರೋಮಾ 2:28,29; 9:6;

11:1-7. ಹೊಸ ಒಡಂಬಡಿಕೆಯಲ್ಲಿ ನಂಬಿದ ಯೆಹೂದ್ಯರು ಮತ್ತು ಅನ್ಯಜನರಿಂದ ಮಾಡಲ್ಪಟ್ಟ ಸಭೆಯನ್ನು "ಇಸ್ರಾಯೇಲ್ಯರ ದೇವರು" ಎಂದು ಎಂದಿಗೂ ಕರೆಯಲ್ಪಡಲಿಲ್ಲ. (NIV ಭಾಷಾಂತರದಲ್ಲಿ ಆ ಗ್ರೀಕ್ ಪದವು "ಸಹ" ಎಂಬ ಅರ್ಥವನ್ನು ಕೊಡುತ್ತದೆ ಎಂಬುದನ್ನು ಬಿಟ್ಟು ಬೇರೆ ಅರ್ಥಕೊಡುವ ಪದಗಳ ಬಗ್ಗೆ ಒಂದು ಟಿಪ್ಪಣಿಯಾದರೂ ಇಲ್ಲ).
**17**

**6:17** ತನ್ನ ಬೋಧನೆಯನ್ನು ಸ್ವೀಕರಿಸಬೇಕೆಂದು ಪೌಲನು ಅಲ್ಲಿಯ ಕ್ರೈಸ್ತರನ್ನು ಬೇಡಿಕೊಳ್ಳುತ್ತಾನೆ, ಸುಳ್ಳು ಬೋಧಕರನ್ನು ತಿರಸ್ಕರಿಸಿರಿ, ಮತ್ತು ಅವನಿಗೆ ತೊಂದರೆ ಕೊಡುವ ಮೂಲವಾಗಬೇಡಿರಿ.

*"ಕರ್ತನಾದ ಯೇಸುವಿನ ಮುದ್ರೆ"*– ಯೇಸುವಿಗಾಗಿ ಸೇವೆ ಮಾಡುವಾಗ ಸ್ವೀಕರಿಸಿದ ಗಾಯದ ಗುರುತುಗಳನ್ನು ಸೂಚಿಸುತ್ತಿರಬಹುದು – 2 ಕೊರಿಂಥ 1:5; 11:23-25; ಕೊಲೊ 1:24. **18**

**6:18** ಪೌಲನು ಪತ್ರಿಕೆಯನ್ನು ಪ್ರಾರಂಭಿಸಿದ ರೀತಿಯಲ್ಲಿಯೇ "ಕೃಪೆ" ಯೊಂದಿಗೆ ಮುಕ್ತಾಯ ಮಾಡುತ್ತಾನೆ (1:6). ಅವರು ಹೊಂದಿಕೊಂಡ ಆಶೀರ್ವಾದಗಳು, ಮುಖ್ಯವಾಗಿ ಆತ್ಮೀಕ ಆಶೀರ್ವಾದಗಳು ಕ್ರಿಸ್ತನ ಕೃಪೆಯ ಮೂಲಕ ಹೊಂದಿಕೊಂಡರೆಂಬುದಕ್ಕೆ ಜ್ಞಾಪಕಾರ್ಥವಾಗಿತ್ತು.